# ಭಾರತದ ವಿವಿಧ ತೀರ್ಥಕ್ಷೇತ್ರಗಳು

ಉಷಾ ಎಸ್. ಮೂರ್ತಿ

ಭಾರತದ ಉದ್ದಕ್ಕೂ ಹರಡಿರುವ ವಿವಿಧ ತೀರ್ಥಕ್ಷೇತ್ರಗಳು ಅಸಂಖ್ಯ; ಅವುಗಳ ದರ್ಶನ, ಯಾತ್ರೆ ಇವುಗಳನ್ನು ಕೈಗೊಳ್ಳುವವರು ಅವುಗಳ ಹಿನ್ನೆಲೆ, ಮಹಿಮೆ, ಇತಿಹಾಸ, ಸಂಪ್ರದಯ ಇತ್ಯಾದಿಗಳನ್ನು ಅರಿತಿರುವುದು ಅತ್ಯಂತ ಮುಖ್ಯ. ಈ ಹಿನ್ನೆಲೆಯಲ್ಲಿ ವಿವಿಧ ತೀರ್ಥಕ್ಷೇತ್ರಗಳ ಬಗ್ಗೆ ಅನೇಕ ಮಾಹಿತಿಗಳನ್ನು ನೀಡಿರುವ ಲೇಖಕಿ ಮೈಸೂರು ಆಶ್ರಮದ ಭಕ್ತರು.




ನಮ್ಮ ಭಾರತದೇಶದ ಉದ್ದಗಲಕ್ಕೂ ಅಸಂಖ್ಯಾತ ತೀರ್ಥಕ್ಷೇತ್ರಗಳಿವೆ. ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ, ಪೂರ್ವದ ದ್ವಾರಕೆಯಿಂದ ಪಶ್ಚಿಮದ ಅಸ್ಸಾಂ ಶಕ್ತಿಪೀಠಗಳವರೆಗೂ ಅನೇಕಾನೇಕ ತೀರ್ಥಕ್ಷೇತ್ರಗಳಿವೆ.

ತೀರ್ಥಕ್ಷೇತ್ರ ಎಂದರೇನು? ತೀರ್ಥ ಎಂದರೆ ಪವಿತ್ರ ಜಲ (ನೀರು) ಎಂದರ್ಥ. ಅದು ದೇವರ ಅಭಿಷೇಕ ಮಾಡಿದ್ದಾಗಿರಬಹುದು, ನದಿ, ಬಾವಿ, ಸಮುದ್ರ ಮುಂತಾದವೆಲ್ಲದರ ಜಲವೂ ಆಗಿರಬಹುದು. ಆದರೆ ಅವೆಲ್ಲವೂ ತೀರ್ಥವೇ, ಪವಿತ್ರವಾದುವೇ.

ಇನ್ನು ಈ ತೀರ್ಥಗಳ ಹತ್ತಿರವಿರುವ ಪವಿತ್ರ ಸ್ಥಳಗಳು ತೀರ್ಥಕ್ಷೇತ್ರಗಳೆಂದೆನಿಸಿಕೊಳ್ಳುತ್ತವೆ. ಪವಿತ್ರ, ಗಿರಿ ಬೆಟ್ಟಗಳಲ್ಲಿರುವ ದೇವ, ದೇವಿಯರ ಸ್ಥಾನಗಳೂ ತೀರ್ಥಕ್ಷೇತ್ರ ಎಂದು ಕರೆಯಲ್ಪಡುತ್ತವೆ. ಈ ಪವಿತ್ರ ಸ್ಥಾನಗಳಲ್ಲಿ ಭಗವಂತನ ವಾಸಸ್ಥಾನವಿದೆ ಎಂಬುದು ಭಕ್ತರ ನಂಬಿಕೆ. ಪರ್ವಕಾಲಗಳಲ್ಲಿ ಈ ತೀರ್ಥಗಳಲ್ಲಿ ಮಿಂದು ಭಗವಂತನ ದರ್ಶನ ಮಾಡಿದರೆ ಪಾಪ ಪರಿಹಾರವಾಗುವುದೆಂದು ಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ ಹೇಳಿದೆ.

ಈ ಕ್ಷೇತ್ರಗಳ ಬಗ್ಗೆ ಧರ್ಮಗ್ರಂಥಗಳಲ್ಲಿ, ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿ ಉಲ್ಲೇಖವಿದೆ. ಈ ಕ್ಷೇತ್ರಗಳಿಗೆ ಭೇಟಿ ಕೊಡುವುದನ್ನು ತೀರ್ಥಯಾತ್ರೆ ಎನ್ನುತ್ತಾರೆ. ಈ ಕ್ಷೇತ್ರಗಳು ಸಾಮನ್ಯವಾಗಿ ನದಿ, ತೊರೆ, ಸಮುದ್ರಗಳ ಹತ್ತಿರದಲ್ಲಿ ಇರುವುದು ಸಾಮಾನ್ಯ. ಹಿಂದಿನಿಂದಲೂ ಈ ಕ್ಷೇತ್ರಗಳ ಸನಿಹಗಳಲ್ಲಿ ಋಷ್ಯಾಶ್ರಮಗಳು, ಗುರುಕುಲಗಳು ಇರುತ್ತಿದ್ದವು. ಈಗಲೂ ಅನೇಕ ಆಶ್ರಮಗಳು ಇರುವುದನ್ನು ನೋಡಬಹುದು.

ಮನುಷ್ಯ ತನ್ನ ಜನ್ಮ ಸಾರ್ಥಕಗೊಳಿಸಿಕೊಳ್ಳಲು ಇರುವ ಅನೇಕ ಮಾರ್ಗಗಳಲ್ಲಿ ತೀರ್ಥಕ್ಷೇತ್ರಗಳ ದರ್ಶನವೂ ಒಂದು ಮುಖ್ಯ ಮಾರ್ಗ. ಭರತಖಂಡದಲ್ಲಿ ಸಹಸ್ರಾರು ವರ್ಷಗಳಿಂದ 'ಕಾಶೀಯಾತ್ರೆ' ಪವಿತ್ರವೆನ್ನಿಸಿದೆ. ಕಾಶಿಯಲ್ಲಿ ಗಂಗೆಯಲ್ಲಿ ಮಿಂದು ಶ್ರೀ ವಿಶ್ವೇಶ್ವರ ದರ್ಶನ ಮಾಡಿದರೆ ಪಾಪ ಪರಿಹಾರವಾಗಿ ಪುಣ್ಯ ಸಿಗುವುದೆಂದು ಬಲವಾದ ನಂಬಿಕೆ. ಮಾನವರಾಗಿ ಪುಣ್ಯಕ್ಷೇತ್ರಗಳ ದರ್ಶನದಿಂದ, ಪ್ರಾಪಂಚಿಕ ಕಷ್ಟಸುಖಗಳಿಂದ ಮುಕ್ತರಾಗಿ ಶಾಶ್ವತ ಬ್ರಹ್ಮಲೋಕ ಪ್ರಾಪ್ತಿಯಾಗುವುದು. ಪರಲೋಕದಲ್ಲಿ ಪರ ಮಾತ್ಮನ ಪಾದಾರವಿಂದಗಳಲ್ಲಿ ಲೀನವಾಗಿ ಮುಕ್ತಿ ಪ್ರಾಪ್ತಿಯಾಗುವುದು ಎಂದು ಶಾಸ್ತ್ರಗಳಲ್ಲೂ ತಿಳಿಸಿದೆ.

ಈ ಭೂಮಿಯ ಮೇಲಿರುವ ಗಿಡ, ಮರ, ಕಲ್ಲು, ಬೆಟ್ಟ ಮುಂತಾದವುಗಳಲ್ಲೂ ಭಗವಂತನ ಇರವನ್ನು ಮನುಷ್ಯ ಭಾವಿಸುತ್ತಾನೆ. ದೇವರ ವಿಗ್ರಹಗಳು ಕಲ್ಲು, ಮಣ್ಣು, ಲೋಹ, ಮರ ಇತ್ಯಾದಿಗಳಿಂದ ಮಾಡಿದ್ದರೂ, ಯಾವ ಆಕಾರಗಳಲ್ಲಿದ್ದರೂ ಅವುಗಳಲ್ಲಿ ಸಾಕ್ಷಾತ್ ಭಗವಂತನೇ ಬೇರೆ ಬೇರೆ ರೂಪಗಳಲ್ಲಿ ನೆಲೆಸಿದ್ದಾನೆ ಎಂದು ನಂಬುತ್ತೇವೆ. ಇನ್ನು ಪಂಚಭೂತಗಳಾದ ಅಗ್ನಿ, ಸೂರ್ಯ, ಚಂದ್ರ, ವಾಯು, ಜಲ, ಆಕಾಶ ಇವುಗಳನ್ನು ಪ್ರತ್ಯಕ್ಷ ಭಗವಂತನೆಂದು ಪೂಜಿಸುತ್ತೇವೆ.

ಪ್ರತಿಯೊಂದು ತೀರ್ಥಕ್ಷೇತ್ರಗಳಿಗೂ ಒಂದೊಂದು ಐತಿಹ್ಯವಿದೆ, ಮಹಿಮೆ ಇದೆ, ಶ್ರೇಷ್ಠತೆ ಇದೆ. ಈ ಕ್ಷೇತ್ರಗಳ ದರ್ಶನವು ಮನವನ್ನು ಹೆಚ್ಚು ಹೆಚ್ಚು ಪರವಶವನ್ನಾಗಿ, ಆಶ್ಚರ್ಯಚಕಿತನನ್ನಾಗಿ ಮಾಡುತ್ತದೆ. ಭಗವಾನ್ ಶ್ರೀರಾಮಕೃಷ್ಣರು ಹೇಳುತ್ತಾರೆ, ದೇವಾಲಯ ಕಣ್ಣಿಗೆ ಬಿತ್ತೆಂದರೆ ಭಗವಂತನೇ ಜ್ಞಾಪಕಕ್ಕೆ ಬರುತ್ತಾನೆ, ಭಕ್ತಿಯ ಉದ್ದೀಪನವಾಗುತ್ತದೆ. ಎಲ್ಲಿ ಆತನ ಸಂಬಂಧವಾಗಿ ಮಾತುಕತೆ ನಡೆಯುವುದೋ ಅಲ್ಲಿ ಆತನ ಆವಿರ್ಭಾವವಾಗುತ್ತದೆ. ಎಲ್ಲಾ ತೀರ್ಥಗಳ ಪಾವಿತ್ರ್ಯತೆ ಅಲ್ಲಿ ನೆಲೆಗೊಳ್ಳುತ್ತದೆ. ಈ ವಿಧದ ಸ್ಥಳಗಳೆಲ್ಲಾ ಭಗವಂತನನ್ನೇ ಸ್ಮರಣೆಗೆ ತರುತ್ತದೆ.

ನಾರದ ಭಕ್ತಿಸೂತ್ರದ 'ಭಕ್ತ ಮಹಿಮೆ'ಯಲ್ಲಿ' 'ತೀರ್ಥೀಕುರ್ವಂತಿ ತೀರ್ಥಾನಿ, ಸುಕರ್ಮೀ ಕುರ್ವಂತಿ ಕರ್ಮಾಣಿ, ಸಚ್ಛಾಸ್ತ್ರೀ ಕುರ್ವಂತಿ ಶಾಸ್ತ್ರಾಣಿ' – 'ಭಕ್ತರು ತೀರ್ಥಗಳನ್ನು ಪವಿತ್ರ ಮಾಡುವರು, ಕರ್ಮವನ್ನು ಸುಕರ್ಮ ಮಾಡುವರು, ಶಾಸ್ತ್ರಗಳನ್ನು ಸತ್-ಶಾಸ್ತ್ರಗಳನ್ನಾಗಿ ಮಾಡುವರು' ಎನ್ನಲಾಗಿದೆ.

ತೀರ್ಥಗಳು ಆಗಲೇ ಹಿಂದಿನವರ ತಪಃಪ್ರಭಾವದಿಂದ ಪವಿತ್ರವಾಗಿರುವ ಸ್ಥಳ. ಭಕ್ತರು ಅಂತಹ ಸ್ಥಳಗಳಿಗೆ ಹೋದರೆ ಅವು ಇನ್ನೂ ಹೆಚ್ಚು ಪವಿತ್ರವಾಗುತ್ತವೆ. ಸಹಸ್ರಾರು ಭಕ್ತರು ತೀರ್ಥಕ್ಷೇತ್ರಗಳಲ್ಲಿ ತಮ್ಮ ಪಾಪಗಳನ್ನು ಕಳೆದು ಪುಣ್ಯ ಪಡೆಯುವರು. ಭಗವದ್ಭಕ್ತರು ಆ ಕ್ಷೇತ್ರಗಳಿಗೆ ಹೋದಾಗ ತಮ್ಮ ಪುಣ್ಯವನ್ನು ಧಾರೆ ಎರೆದು, ತನ್ನ ಪುಣ್ಯಗಳನ್ನು ಕಳೆದುಕೊಳ್ಳುತ್ತಿರುವ ಕ್ಷೇತ್ರಗಳಿಗೆ ಹೊಸ ಜೀವನ

ವನ್ನು ತುಂಬುವರು. ಇಂತಹ ಭಗವದ್ಭಕ್ತರ ಪಾದಸ್ಪರ್ಶದಿಂದ, ಮಹಾತ್ಮರು ಜನ್ಮವೆತ್ತ ಸ್ಥಳಗಳೆಲ್ಲಾ ತೀರ್ಥಕ್ಷೇತ್ರಗಳೇ. ಉದಾ: ಶ್ರೀ ರಾಮಕೃಷ್ಣರು, ಶ್ರೀ ಜಗದ್ಗುರು ಶಂಕರಾಚಾರ್ಯರು, ಭಗವಾನ್ ಬುದ್ಧ ಮುಂತಾದವರು ಜನಿಸಿದ ಸ್ಥಳಗಳೂ ನಮಗೆ ತೀರ್ಥ ಕ್ಷೇತ್ರಗಳೇ.

ಭಾರತದ ಕೆಲವು ಮುಖ್ಯ ತೀರ್ಥಕ್ಷೇತ್ರಗಳ ಬಗ್ಗೆ ವಿವರಣೆ ಇಂತಿದೆ:

## ಉತ್ತರಾಖಂಡ

ಉತ್ತರ ಭಾರತದ ಹಿಮಾಲಯದಲ್ಲಿರುವ ಪವಿತ್ರ ಪುಣ್ಯಕ್ಷೇತ್ರ ಶ್ರೀ **ಕೇದಾರೇಶ್ವರ ದೇವಾಲಯ.** ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಈ ಕ್ಷೇತ್ರವು ಉತ್ತರಾಖಾಂಡ ರಾಜ್ಯಕ್ಕೆ ಸೇರಿದೆ. ಪಂಚಕೇದಾರ ಗಳಲ್ಲಿ ಇದು ಒಂದು. ಕೇದಾರ, ಬದರಿ, ಹರಿದ್ವಾರ, ಋಷಿಕೇಶಗಳು **ಚಾರ್‌ಧಾಮ್** ಎಂದು ಕರೆಯಲ್ಪಡುತ್ತವೆ.

ಸಮುದ್ರಮಟ್ಟದಿಂದ ೧೨೭೫೫ ಅಡಿ ಎತ್ತರದಲ್ಲಿರುವ ಕೇದಾರ ನಾಥ ಮಂದಿರುವು ೧೨ ಅಡಿ ದಪ್ಪದ ಗೋಡೆ, ೮೫ ಅಡಿ ಎತ್ತರ, ೧೮೭ ಅಡಿ ಉದ್ದ ಹಾಗೂ ೮೦ ಅಡಿ ಅಗಲವುಳ್ಳದ್ದಾಗಿದೆ. ಗೂಳಿಯ ಗೂನಿನ ಆಕಾರದಲ್ಲಿರುವ ಈ ವಿಶಿಷ್ಟ ಸ್ವಯಂಭೂ ಲಿಂಗವನ್ನು ಜನಮೇಜಯ ರಾಜ ಪ್ರತಿಷ್ಠಾಪನೆ ಮಾಡಿದನೆಂದು ಪ್ರತೀತಿ ಇದೆ.

ಮಹಾಭಾರತದ ಸ್ವರ್ಗಾರೋಹಣ ಪರ್ವದಲ್ಲಿ ಪಾಂಡವರು ಸ್ವರ್ಗಕ್ಕೆ ಹೋಗುವ ಮಾರ್ಗದಲ್ಲಿ ಕೇದಾರೇಶ್ವರಕ್ಕೆ ಬಂದು ಕೇದಾರ ನಾಥನನ್ನು ಪೂಜಿಸಿದರು ಎಂದು ಹೇಳಿದೆ. ಜಗದ್ಗುರು ಶ್ರೀಶಂಕರ ಭಗವತ್ಪಾದರು ಈ ಕ್ಷೇತ್ರದಲ್ಲಿ ತಪಸ್ಸು ಮಾಡಿ ತಮ್ಮೊಡನಿದ್ದ ವೃಷಭ ದೊಂದಿಗೆ ಹಿಮವತ್ಪರ್ವತದಲ್ಲಿ ಲೀನರಾದರು ಎಂದು 'ಶಂಕರ ವಿಜಯ' ದಲ್ಲಿ ಉಲ್ಲೇಖವಿದೆ. ಈಗಲೂ ಅವರ ಪಾದದ ಕುರುಹು, ತಪಸ್ಸು ಮಾಡಿದ ಸ್ಥಳ ಕೇದಾರನಾಥನ ದೇಗುಲದ ಹಿಂಬದಿಯಲ್ಲಿದೆ. ಇಲ್ಲಿನ ನಯನ ಮನೋಹರ ಹಿಮಾಚ್ಛಾದಿತ ಪರ್ವತಗಳು, ರುದ್ರರಮಣೀಯ ಕಂದಕಗಳು, ನದಿ, ನೀರವತೆ, ಭಗವಂತನ ಸಾನ್ನಿಧ್ಯ ಎಂಥಾ ನಾಸ್ತಿಕರನ್ನು ಮೂಕಗೊಳಿಸಿ ಧನ್ಯರನ್ನಾಗಿಸುತ್ತದೆ.

**ಬದರೀನಾರಾಯಣ ಕ್ಷೇತ್ರ :** ಹಿಮಾಲಯದ ಅಲಕನಂದಾ ತಟದಲ್ಲಿರುವ ಪವಿತ್ರ ಪುಣ್ಯಕ್ಷೇತ್ರ. ಈ ಸ್ಥಳವು ದೇವಭೂಮಿ ಎಂದು ಕರೆಯಲ್ಪಡುತ್ತದೆ. ಬದರೀಕ್ಷೇತ್ರವು ಸಮುದ್ರಮಟ್ಟದಿಂದ ೧೦,೩೦೦ ಅಡಿ ಎತ್ತರದಲ್ಲಿದ್ದು ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿದೆ. ನರ-ನಾರಾಯಣ ಪರ್ವತಗಳ ಮಧ್ಯೆ ಅಲಕನಂದಾ ನದಿ ಹರಿಯುತ್ತದೆ. ಇಲ್ಲಿ ಆ ನದಿಯನ್ನು ಶ್ರೀಮನ್ನಾರಾಯಣನ ಪಾದೋದಕ ಎನ್ನುತ್ತಾರೆ. ಬದರಿ ಎಂದರೆ 'ಎಲಚೀಕಾಯಿ' ಎಂದರ್ಥ. ಈ ಕ್ಷೇತ್ರವು ವೈಷ್ಣವರ ೧೦೮ ದಿವ್ಯದೇಶಗಳಲ್ಲಿ ಒಂದು ಎಂದು ಪರಿ ಗಣಿಸಲ್ಪಟ್ಟಿದೆ. ಹರಿವಂಶ, ಭಾರತ, ಭಾಗವತ ಮೊದಲಾದ ಪುರಾಣಗಳಲ್ಲಿ ಈ ಕ್ಷೇತ್ರವನ್ನು ''ಆಧ್ಯಾತ್ಮಿಕ' ರಾಜಧಾನಿ ಎಂದು ವರ್ಣಿಸಿದ್ದಾರೆ.

ಬೌದ್ಧರ ಕಾಲದಲ್ಲಿ ಬೌದ್ಧಭಿಕ್ಷುಗಳು ಈ ವಿಗ್ರಹವನ್ನು ಅಲಕನಂದಾ ನದಿಯಲ್ಲಿ ಮುಚ್ಚಿಟ್ಟಿದ್ದರಂತೆ. ಜಗದ್ಗುರು ಶ್ರೀಶಂಕರ ಭಗವತ್ಪಾದರು ನದಿಯಿಂದ ಹುಡುಕಿ ತಂದು ತಪ್ತಕುಂಡದ ಹತ್ತಿರವಿರುವ ಗುಹೆಯಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದರೆಂದು ಪ್ರತೀತಿಯಿದೆ. ಈ ದೇವಾಲಯವು ಹಲವು ಬಾರಿ ನವೀಕರಿಸಲ್ಪಟ್ಟಿದೆ. ೧೬ನೇ ಶತಮಾನದಲ್ಲಿ ಗಡವಾತನ ಅರಸರು ಈಗಿರುವ ದೇವಾಲಯವನ್ನು ಕಲ್ಲುಗಳಿಂದ ಕಟ್ಟಿಸಿದರು. ದೇವಾಲಯ ೫೦ ಅಡಿ ಎತ್ತರವಿದ್ದು, ತುದಿಯಲ್ಲಿ ಬಂಗಾರದ ಪುಟ್ಟಗೋಪುರವಿದೆ.

ಸಾಲಿಗ್ರಾಮ ಶಿಲೆಯ ಶ್ರೀಬದರೀನಾರಾಯಣ ಮೂರ್ತಿ ಒಂದು ಮೀಟರ್ ಎತ್ತರವಿದೆ. ಜೊತೆಗೆ ಇಲ್ಲಿ ನರ-ನಾರಾಯಣ, ನರಸಿಂಹ, ಲಕ್ಷ್ಮೀ, ಉದ್ಧವ, ಗರುಡ, ನಾರದ ಹಾಗೂ ನವದುರ್ಗೆಯರನ್ನು ಪೂಜಿಸುತ್ತಾರೆ. ಹತ್ತಿರದಲ್ಲೇ ವ್ಯಾಸಮಹಾಮುನಿಗಳು ಮಹಾಭಾರತವನ್ನು ರಚಿಸಿದರು ಎನ್ನಲಾದ ವ್ಯಾಸ ಗುಹೆ, ಗಣೇಶ ಗುಹೆಗಳಿವೆ. ಹವಾಮಾನದ ವೈಪರೀತ್ಯದ ಕಾರಣ ಅಕ್ಟೋಬರ್ ತಿಂಗಳಿಂದ ಮೇ ತಿಂಗಳವರೆಗೆ ಉತ್ಸವ ಮೂರ್ತಿಯನ್ನು ಕೆಳಗಡೆ ಇರುವ ಜ್ಯೋತಿರ್ಮಠ ಅಥವಾ ಜೋಷಿಮಠದಲ್ಲಿಟ್ಟು ಪೂಜಿಸುತ್ತಾರೆ.

**ಋಷಿಕೇಶ:** ನಾಲ್ಕು ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಈ ಕ್ಷೇತ್ರವೂ ಒಂದು. ಸ್ಕಂದ ಪುರಾಣದ ಕೇದಾರಖಂಡದಲ್ಲಿ ಈ ಸ್ಥಳದ ಬಗ್ಗೆ ಉಲ್ಲೇಖವಿದೆ. ಈ ಕ್ಷೇತ್ರದಲ್ಲಿ ರಬ್ಬಮುನಿ ಶ್ರೀಮಹಾವಿಷ್ಣುವನ್ನು ತಪಸ್ಸು ಮಾಡಿ ಪ್ರಾರ್ಥಿಸಿದಾಗ ವಿಷ್ಣುವು ಋಷಿಕೇಶನ ರೂಪದಲ್ಲಿ ಈ ಕ್ಷೇತ್ರದಲ್ಲಿ ನೆಲೆಸಿ ಸದಾ ಭಕ್ತರಿಗೆ ಅನುಗ್ರಹ ಮಾಡುತ್ತಿರುತ್ತೇನೆ ಎಂದು ಹೇಳಿದನೆಂದು ಪ್ರತೀತಿ ಇದೆ. ಮೊದಲು 'ರಿಸಿಕೇಶ' ಎಂದು ಕರೆಯಲ್ಪಡುತ್ತಿದ್ದು ಈಗ 'ಋಷಿಕೇಶ' ಎಂದು ಪ್ರಸಿದ್ಧಿಯಾಗಿದೆ. ಈ ಸ್ಥಳದ ಮೂಲಕವೇ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರೀನಾಥ ಕ್ಷೇತ್ರಗಳಿಗೆ ಹೋಗಲು ದಾರಿ ಇದೆ.

ಹರಿದ್ವಾರದಿಂದ ೨೫ ಕಿ.ಮೀ. ದೂರವಿರುವ ಈ ಕ್ಷೇತ್ರದಲ್ಲಿ ಅಧ್ಯಾತ್ಮ ಯೋಗ, ಸಾಧಕರ ಆಶ್ರಮಗಳಿದ್ದು ದೂರದೂರಗಳಿಂದ ಜನರನ್ನು ಆಕರ್ಷಿಸುತ್ತವೆ. ಈ ಪುಣ್ಯಕ್ಷೇತ್ರ 'Yoga Capital of the World' ಎಂದು ಪ್ರಸಿದ್ಧಿ ಪಡೆದಿದೆ. ಇಲ್ಲಿ ಅನೇಕ ದೇವಾಲಯಗಳು, ಆಶ್ರಮಗಳಿವೆ. ಅವುಗಳಲ್ಲಿ ೧೨ನೇ ಶತಮಾನದಲ್ಲಿ ಸ್ಥಾಪಿತವಾದ 'ಭಾರತ ಮಂದಿರ' ಮುಖ್ಯವಾದದು.

ಗಂಗಾನದಿಯ ಮತ್ತೊಂದು ದಡಕ್ಕೆ ಹೋಗಲು 'ರಾಮ ಝೂಲಾ, ಲಕ್ಷ್ಮಣಝೂಲಾ' ಎಂಬ ಎರಡು ಸೇತುಗಳಿವೆ. ಲಕ್ಷ್ಮಣನು ಶ್ರೀರಾಮನಿಗೆ ನದಿ ದಾಟಲು ಹಗ್ಗದಿಂದ ಮಾಡಿದ ತೂಗು ಸೇತುವೆ ಆಗಿದೆ. ಈ ಸೇತುವೆಯ ಪಕ್ಕದಲ್ಲೇ ತುಂಬಾ ಅಪರೂಪದ ಲಕ್ಷ್ಮಣನ ದೇವಾಲಯವಿದೆ. ದೂರದಿಂದ ನೋಡಲು ಈ ಸೇತುವೆಗಳು ತುಂಬ ಸುಂದರ.

ಇಲ್ಲಿನ ಸ್ವರ್ಗಾಶ್ರಮದ ಶಿಬಿರದಲ್ಲಿ ನೀಲಕಂಠನ ಪ್ರಸಿದ್ಧ ದೇವಾಲಯವಿದೆ. ಗೀತಾ ಭವನ ಪ್ರಸಿದ್ಧವಾದ ಆಶ್ರಮ.

### ಹರಿದ್ವಾರ-ಸ್ವರ್ಗಕ್ಕೆ ದಾರಿ

ಹರಿದ್ವಾರವು ಮಾಯಾ ಎಂದೂ ಕರೆಯಲ್ಪಡುತ್ತದೆ. ಹಾಗೇ ದೇವಭೂಮಿ, ಧಾರ್ಮಿಕ ನಗರ ಎಂದೂ ಹೇಳುತ್ತಾರೆ. ''ಹರ್ ಕಿ

ಪೌಡಿ'' ಅಥವಾ ''ಬ್ರಹ್ಮ ಕುಂಡ'' ಇಲ್ಲಿನ ಪ್ರಮುಖ ಘಾಟ್ ಆಗಿದ್ದು ಇಲ್ಲಿನ ಗಂಗಾರತಿ ಸುಂದರ ಹಾಗೂ ಪ್ರಸಿದ್ಧವಾದದು.

ಮಾನಸಾದೇವಿ ಮಂದಿರ, ಚಂಡೀಮಂದಿರ, ಬಿಲ್ವಕೇಶ್ವರ ಮಂದಿರಗಳು ಪ್ರಮುಖವಾದವುಗಳು. ಮಾನಸಾದೇವಿಮಂದಿರ ಬೆಟ್ಟದ ಮೇಲಿದ್ದು ಹತ್ತಿ ಹೋಗಲು ಮೆಟ್ಟಿಲುಗಳು ಹಾಗೂ Rope Way ಇದೆ. ಮಾನಸಾದೇವಿಯ ಭಗವಾನ್ ಶಂಕರನ ಮಗಳು, ವಾಸುಕಿಯ ತಂಗಿ ಹಾಗೂ ಜರತ್ಕಾರುವಿನ ಹೆಂಡತಿ ಎಂದು ಪುರಾಣದಲ್ಲಿ ಹೇಳಲ್ಪಡುತ್ತದೆ. ಇದು ಒಂದು ಶಕ್ತಿಪೀಠ ವೆಂದು ಪರಿಗಣಿಸಲಾಗಿದೆ; ಇದು ಬಹು ಪ್ರಾಚೀನ ಮಂದಿರ.

ಚಂಡೀದೇವಿ ಮಂದಿರಕ್ಕೆ ರೋಪ್‌ವೇ ನಲ್ಲೇ ಹೋಗಬೇಕು. ಹರಿದ್ವಾರ ಪಂಚತೀರ್ಥಗಳಲ್ಲಿ ಇದೂ ಒಂದಾಗಿದೆ. ಈ ಬೆಟ್ಟದ ಮೇಲೆ ನಿಂತರೆ ಗಂಗೆಯ ಅದ್ಭುತ ದರ್ಶನವಾಗುತ್ತದೆ. ಬಿಲ್ವಕೇಶ್ವರ ಮಂದಿರ ಪಾರ್ವತಿದೇವಿ ತಪಸ್ಸು ಮಾಡಿದ ಸ್ಥಳ. ಇಲ್ಲಿ ಮಿಂದರೆ ಪಾಪ ಪರಿಹಾರವಾಗುವು ದೆಂದು ಹೇಳಲ್ಪಡುತ್ತದೆ. ಇಲ್ಲಿಂದ ೫ ಕಿ.ಮೀ. ದೂರದಲ್ಲಿ ದಕ್ಷೇಶ್ವರ ಮಂದಿರವಿದ್ದು ಸತಿಯ ತಂದೆ ದಕ್ಷ ಪ್ರಜಾಪತಿಯ ದೇಗುಲ ಎಂದು ಹೇಳುತ್ತಾರೆ.

ಹರಿದ್ವಾರದ ಕುಂಭಮೇಳ ಬಹುಪ್ರಸಿದ್ಧವಾದದ್ದು. ಲಕ್ಷಾಂತರ ಭಕ್ತರು ಸಾಧು ಸಂನ್ಯಾಸಿಗಳು ಸೇರಿ ಪರ್ವದಿನ, ಲಗ್ನಗಳಲ್ಲಿ ಗಂಗೆಯಲ್ಲಿ ಮಿಂದು ಪಾವನರಾಗುತ್ತಾರೆ.

**ಮಾಯಾವತಿ:** ಉತ್ತರಾಖಂಡದ ಚಂಪಾವತ್ ಜಿಲ್ಲೆಗೆ ಸೇರಿದ ಮಾಯಾವತಿ ಅತ್ಯಂತ ರಮಣೀಯ ಸ್ಥಳ. ಸಮುದ್ರ ಮಟ್ಟದಿಂದ ೬೪೦೦ ಅಡಿ ಎತ್ತರದಲ್ಲಿದೆ. ಒಂದು ಕಡೆ ಹಿಮಾಲಯ ಪರ್ವತಗಳು ಮಿಕ್ಕ ಮೂರು ಕಡೆ ಬೆಟ್ಟಗಳಿವೆ. ಈ ಸ್ಥಳದಿಂದ ೧೦. ಕಿ. ಮೀ. ದೂರದಲ್ಲಿರುವ ಲೋಹಾಘಾಟ್ ಎಂಬ ಊರೇ ಹತ್ತಿರವಾದುದು.

೧೮೯೯ರಲ್ಲಿ ಸ್ವಾಮಿ ವಿವೇಕಾನಂದರು ಸ್ಟೀಫನ್‌ಸನ್ ದಂಪತಿಗಳೊಡನೆ ಇಲ್ಲಿಗೆ ಬಂದು ಶ್ರೀರಾಮಕೃಷ್ಣ ಅದ್ವೈತ ಮಠವನ್ನು ಸ್ಥಾಪಿಸಿದರು. ಆಶ್ರಮ, ಆಸ್ಪತ್ರೆ, ಪ್ರವಾಸಿಮಂದಿರ ಬಿಟ್ಟರೆ ಬೇರೆ ಯಾವ ಕಟ್ಟಡವೂ ಇಲ್ಲ. ಅತ್ಯಂತ ಶಾಂತ ರಮಣೀಯ ಸ್ಥಳ. ಧ್ಯಾನ, ತಪಸ್ಸು ಮಾಡಲು ಪ್ರಶಸ್ತವಾಗಿದೆ. ಆಶ್ರಮದಿಂದ ಬೆಟ್ಟದ ತುದಿಗೆ ಹೋದರೆ ಅಲ್ಲಿ ಸ್ವಾಮಿ ವಿವೇಕಾನಂದರು ತಪಸ್ಸು ಮಾಡಿದ ಕೊಠಡಿ ಇದೆ. ಇಲ್ಲಿಂದ ಹಿಮಾಲಯದ ಎತ್ತರದ ಶಿಬಿರಗಳ ಮನೋಹರ ದೃಶ್ಯ ಕಾಣಸಿಗುತ್ತದೆ.

**ಶ್ಯಾಮಲಾತಾಲ್:** ಮಾಯಾವತಿಗೆ ಹತ್ತಿರವಿರುವ ಈ ಸ್ಥಳ ತುಂಬಾ ಸುಂದರವಾಗಿದೆ. ತಾಲ್ ಎಂದರೆ ಸಣ್ಣ ಸರೋವರ ಅಥವಾ ಕೆರೆ ಎಂದರ್ಥ. ಇಲ್ಲೂ ಆಸ್ಪತ್ರೆ, ಪ್ರಾರ್ಥನಾ ಮಂದಿರ, ಶ್ರೀರಾಮಕೃಷ್ಣ ಮಠವಿದೆ. ಸ್ವಾಮಿ ವಿರಜಾನಂದರು ವಾಸಿಸುತ್ತಿದ್ದ ಕೋಣೆಯೂ ಇದೆ. ಈ ಸ್ಥಳ ಜಪ, ಧ್ಯಾನಮಾಡಲು ಪ್ರಶಸ್ತವಾಗಿದೆ. ಸ್ವಾಮಿ ವಿರಜಾನಂದರು ಇಲ್ಲಿನ ಅತ್ಯಂತ ದುರ್ಗಮವಾದ ಬೆಟ್ಟಗಳಲ್ಲಿ ತಪಸ್ಸು ಮಾಡಿದ್ದರಂತೆ. ಇಲ್ಲಿಂದ ನೇಪಾಳ ಪ್ರವೇಶಿಸಲು ದೊಡ್ಡ ಸೇತುವೆ ಇದೆ. ಸೇತುವೆಯ ಕೆಳಗೆ ಏಳು ನದಿಗಳು ಹರಿಯುತ್ತವೆ ಎಂದು ಹೇಳುತ್ತಾರೆ. ಸುಂದರ, ಮನೋಹರ, ಶಾಂತ ಸ್ಥಳ ಇದು.

**ಆಲ್ಮೋರಾ:** ಸ್ವಾಮಿ ವಿವೇಕಾನಂದರ ಪ್ರಸಿದ್ಧ ಪುಸ್ತಕ 'ಕೊಲಂಬೋ ಇಂದ ಆಲ್ಮೋರಕೆ' ಓದಿದರೆ ಈ ಸ್ಥಳದ ಔನ್ನತ್ಯ ತಿಳಿಯುತ್ತದೆ. ಇಲ್ಲಿ ಬೆಟ್ಟದ ಸ್ತರ ಸ್ತರಗಳಲ್ಲಿ ಊರು ಬೆಳೆದಿದೆ. ಸ್ವಾಮಿ ವಿವೇಕಾನಂದರ ವಿದೇಶೀ ಶಿಷ್ಯೆ ಕುಮಾರಿ ನಿವೇದಿತಾ ಇಲ್ಲಿ ವಾಸವಿದ್ದು ಅವರ ಹೆಸರಿನ ವಿಶ್ವವಿದ್ಯಾಲಯವಿದೆ. ಶಾರದಾ ಮಠವೂ ಇದ್ದು ಹಿಂದುಳಿದ ಸ್ತ್ರೀಯರಿಗೆ ಹೊಲಿಗೆ ಮುಂತಾದ ಕೆಲಸಗಳನ್ನು ಜೀವನೋಪಾಯಕ್ಕಾಗಿ ಹೇಳಿಕೊಡುತ್ತಾರೆ. ತುಂಬಾ ಚೆಲುವಾದ ಸ್ಥಳ. ಬೆಟ್ಟದ ತೀರ ತಳಭಾಗದಲ್ಲಿ ಕೋಶಿ ನದಿ ಹರಿಯುತ್ತದೆ.

## ರಾಜಸ್ಥಾನ

ರಾಜಸ್ಥಾನದಲ್ಲಿ ಜಯಪುರ ತುಂಬಾ ಪ್ರಸಿದ್ಧವಾದ ಕ್ಷೇತ್ರ. ಶ್ರೀಗೋವಿಂದ ದೇವಮಂದಿರ ೪,೯೦೦ ವರ್ಷಗಳಷ್ಟು ಪುರಾತನವಾದದ್ದು. ಮನೋಹರವಾಗಿದೆ. ಯಾವಾಗಲೂ ಭಕ್ತರಿಂದ ತುಂಬಿರುತ್ತದೆ. ಇಲ್ಲಿನ ಜಗದೀಶ ಮಂದಿರ ಸುಂದರ ಕೆತ್ತನೆಗಳಿಂದ ಕೂಡಿದ್ದು ಭಕ್ತೆ ಮೀರಾ ಬಾಯಿ ಪೂಜಿಸುತ್ತಿದ್ದ ವಿಗ್ರಹ ಎನ್ನುತ್ತಾರೆ.

ವೈಜನಾಥ ಮಾತಾ ಹೇಳಿದಂತೆ ಮೊದಲು ಈ ವಿಗ್ರಹಗಳು ಮಥುರಾನಗರದಲ್ಲಿ ಸ್ಥಾಪಿಸಲ್ಪಟ್ಟಿತ್ತು. ೧೧ನೇ ಶತಮಾನದಲ್ಲಿ ಮೊಹಮ್ಮದ್ ಘಜನಿ ಈ ವಿಗ್ರಹಗಳನ್ನು ಕಾಡಿನಲ್ಲಿ ಮುಚ್ಚಿಟ್ಟದ್ದನಂತೆ. ಶ್ರೀ ಚೈತನ್ಯ ಮಹಾಪ್ರಭುಗಳ ಅಣತಿಯಂತೆ ೧೯೧೭ರಲ್ಲಿ ಗೋಪೀನಾಥನನ್ನು ವೃಂದಾವನದಲ್ಲೂ ದ್ವಾರಕಾಧೀಶನನ್ನು ದ್ವಾರಕೆಯಲ್ಲೂ, ಗೋವಿಂದನ್ನು ಜಯಪುರದಲ್ಲಿ ಸ್ಥಾಪಿಸಲಾಯಿತು. ಗೋಪೀನಾಥ ಮಂದಿರದಲ್ಲಿ ಮುಖ್ಯವಾಗಿ ಭಗವಂತನನ್ನು ಮಂಗಲಾ, ಶೃಂಗಾರ್, ಗ್ವಾಲ್, ಉತ್ಥೋಧನ್, ರಾಜ್‌ಭೋಗ್, ಸಂಧ್ಯಾ, ಆರತಿ ಶಯನ್ ಎಂಬ ಎಂಟು ದರ್ಶನಗಳಲ್ಲಿ ನೋಡ ಬಹುದು. ಇಲ್ಲಿ ಕೇಸರಿ, ಕಸ್ತೂರಿ, ಅಂಬರ್, ಬರಾತ್‌ಗಳಿಂದ ಪೂಜಿಸುತ್ತಾರೆ.

ಕಾಂರೌಲಿಯಲ್ಲಿ ದ್ವಾರಕಾಧೀಶ ಮಂದಿರವಿದೆ. ರಾಜಾ ಅಂಬರೀಷನಿಂದ ಶ್ರೀಕೃಷ್ಣ ಇಲ್ಲಿ ಪೂಜಿಸಲ್ಪಡುತ್ತಿದ್ದನೆಂದು ಪ್ರತೀತಿ ಇದೆ.

**ನಾಥದ್ವಾರ:** ಉದಯಪುರಕ್ಕೆ ಹತ್ತಿರವಿರುವ ದೆಹಲಿ-ಜಯಪುರ ಮುಖ್ಯ ಮಾರ್ಗದಲ್ಲಿದೆ. ಶ್ರೀನಾಥನ ಸುಂದರ, ಮನಮೋಹಕವಾಗಿರುವ ಪುರಾತನ ದೇಗುಲ. ಇಲ್ಲಿ ಶ್ರೀಕೃಷ್ಣ ಏಳು ವರ್ಷದ ಬಾಲಕನಂತೆ ಪೂಜಿಸಲ್ಪಡುತ್ತಾನೆ. ವೈಷ್ಣವ ಸಂಪ್ರದಾಯದವರ ಮುಖ್ಯ ದೇವರು. ಶ್ರೀವಲ್ಲಭಾಚಾರ್ಯರು ವಲ್ಲಭ ಸಂಪ್ರದಾಯದಂತೆ ಇದನ್ನು ಪೂಜಿಸಿದ್ದರು. ಈಗಲೂ ಈ ಸಂಪ್ರದಾಯವೇ ರೂಢಿಯಲ್ಲಿದೆ. ಮುಸ್ಲಿಂ ದೊರೆ ಔರಂಗಜೇಬನು ಒಂದು ಪ್ರಸಂಗದಿಂದ ಶ್ರೀನಾಥನಿಗೆ ಬೆಲೆಬಾಳುವ ಒಂದು ಮುತ್ತು ಕೊಟ್ಟನಂತೆ. ಈಗಲೂ ಆ ಮುತ್ತು ಶ್ರೀನಾಥನ ವಿಗ್ರಹದ ಗಲ್ಲದಲ್ಲಿದೆ.

ರಾಜಸ್ಥಾನದ ಜುನ್‌ಜುನು ಜಿಲ್ಲೆಯಲ್ಲಿ ಅನೇಕ ಸತಿಮಂದಿರಗಳಿವೆ. ಅರಮನೆಯಲ್ಲಿ ತನ್ನ ಪ್ರಾಣ ರಹಿತ ಗಂಡನನ್ನು ತೊಡೆಯ ಮೇಲಿಟ್ಟುಕೊಂಡು ಸಹಗಮನ ಮಾಡಿರುವ ಸ್ಥಳಕ್ಕೆ ಸತಿಮಂದಿರವೆನ್ನುತ್ತಾರೆ. ಹೀಗೆ ಅನೇಕ ಮಂದಿರಗಳು, ಹವೇಲಿಗಳು ಇಲ್ಲಿನ ಇತಿಹಾಸಕ್ಕೆ ಸಾಕ್ಷಿಯಾಗಿವೆ.

ರಾಜಸ್ಥಾನದಲ್ಲಿ ಖೇತ್ರಿ ರಾಜಾ ಅಜಿತ್‌ಸಿಂಗರು ರಾಜ್ಯವಾಳಿದ ಸ್ಥಳ. ಸುಂದರ ಅರಮನೆ ಇದೆ. ಈಗ ಇದು ಶ್ರೀರಾಮಕೃಷ್ಣ ಮಠಕ್ಕೆ ಸೇರಿದೆ. ಅರಮನೆಯ ಒಳಗೆ ವಸ್ತು ಸಂಗ್ರಹಾಲಯವನ್ನು ಸುಂದರವಾಗಿ ನಿರ್ಮಿಸಿದ್ದಾರೆ. ಸ್ವಾಮಿ ವಿವೇಕಾನಂದರು ಇಲ್ಲಿ ಅಜಿತ್‌ಸಿಂಗರ ಅತಿಥಿಯಾಗಿದ್ದರು. ಸ್ವಾಮೀಜಿಯವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ರಾಜಾ ಅಜಿತ್‌ಸಿಂಗರು ಸಹಾಯ ಮಾಡಿದ್ದರು. ಅವರಿಗೆ ಸ್ವಾಮೀಜಿಯವರ ಬಗ್ಗೆ ತುಂಬಾ ಭಕ್ತಿ ಗೌರವವಿತ್ತು. ಖೇತ್ರಿಯಲ್ಲಿ ತಾಮ್ರದ ಗಣಿಗಳಿವೆ ಹಾಗೂ ರಕ್ಷಣಾ ಪಡೆಯ ವಸಾಹತುಗಳೂ ಇವೆ.

ಜಯಪುರದಲ್ಲಿರುವ ಶ್ರೀರಾಮಕೃಷ್ಣ ಮಠ ಸುಂದರವಾಗಿದೆ. ವಿಶಾಲವಾದ ಧ್ಯಾನಮಂದಿರ ಎತ್ತರದಲ್ಲಿದ್ದು ದೂರದಿಂದಲೂ ಶ್ರೀರಾಮಕೃಷ್ಣರ ಪುತ್ಥಳಿ ತುಂಬಾ ಚೆನ್ನಾಗಿ ಕಾಣುತ್ತದೆ. ಜಯಪುರದಲ್ಲಿ ಕೆಂಪುಕಲ್ಲುಗಳು ಹೆಚ್ಚಾಗಿ ಬಳಸುವುದರಿಂದ Red City of India ಎನ್ನುತ್ತಾರೆ.

## ಗುಜರಾತ್

**ದ್ವಾರಕೆ :** ಜಗತ್‌ಮಂದಿರ ತ್ರಿಲೋಕ ಸುಂದರ ಎಂದು ಕರೆಯಲ್ಪಡುವ ದ್ವಾರಕಾಧೀಶನ ಭವ್ಯ ಮಂದಿರವು ಶ್ರೀಕೃಷ್ಣನ ಪವಿತ್ರ ದೇವಸ್ಥಾನ. ಈ ದೇಗುಲದ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿದ್ದರೂ ೧೦೦೦ ವರ್ಷಗಳಷ್ಟು ಹಿಂದಿನದು ಎನ್ನಬಹುದಾಗಿದೆ. ೮ನೇ ಶತಮಾನದಲ್ಲಿ ಜಗದ್ಗುರು ಶ್ರೀಶಂಕರಾಚಾರ್ಯರು ಪೂರ್ವದ ಪೂರ್ವಾಮ್ನಾಯ ಪೀಠವನ್ನು ಇಲ್ಲಿ ಸ್ಥಾಪಿಸಿದ್ದಾರೆ. ಶ್ರೀಕೃಷ್ಣನ ಈ ದೇಗುಲವನ್ನು ರಜಪೂತರು, ನಂತರ ಶ್ರೀಕೃಷ್ಣ ಮೊಮ್ಮಗನಾದ ವ್ರಜನಾಥನು ೧೮೧೧ರಲ್ಲಿ ಪುನಃ ನಿರ್ಮಾಣ ಮಾಡಿದರೆಂದು ತಿಳಿಯು ತ್ತದೆ.

ಈ ದೇವಸ್ಥಾನ ಅತ್ಯಂತ ಸುಂದರವಾಗಿದ್ದು ೩೮ ಅಡಿ ಎತ್ತರ, ೫ ಮೀಟರ್ ಅಗಲ ಇದೆ. ಸಮುದ್ರದ ಪಕ್ಕದಲ್ಲೇ ಇದ್ದರೂ ವಸ್ತು ಶಿಲ್ಪಗಳು, ಗೋಪುರದ ಕಲಾಕೃತಿಗಳು ಸ್ವಲ್ಪವೂ ಹಾನಿಗೊಳಗಾಗಿಲ್ಲ. ಗೋಪುರ ನಾಗರ ವಾಸ್ತು ರೀತಿಯಲ್ಲಿದ್ದು ೫ ಮಜಲುಗಳಿವೆ. ಗೋಪುರದ ತುದಿಯಲ್ಲಿ ಧ್ವಜ ಹಾರಿಸುತ್ತಾರೆ. ಧ್ವಜ ಪೂರ್ವ ದಿಕ್ಕಿಗೇ ಹಾರುತ್ತಿರುತ್ತದೆ. ಧ್ವಜದಲ್ಲಿ ಸೂರ್ಯ, ಚಂದ್ರರ ಚಿತ್ರಗಳಿದ್ದು ಶ್ರೀಕೃಷ್ಣನ ಸಾಮ್ರಾಜ್ಯದ ಪ್ರತೀಕವೆಂದು ಹೇಳುತ್ತಾರೆ. ಇಲ್ಲಿನ ಜನ ದ್ವಾರಾಕಾಧೀಶನನ್ನು ಮಗುವಿನಂತೆ, ಮಾನವನಂತೆ ಪೂಜಿಸಿ ಆರಾಧಿಸುತ್ತಾರೆ. ಭಗವಂತನನ್ನು ಬೆಳಗ್ಗೆ ಆರತಿಮಾಡಿ ಎಬ್ಬಿಸಿ, ಸಂಜೆ ಶಯನಾರತಿ ಮಾಡಿ ಮಲಗಿಸುತ್ತಾರೆ.

**ಸೋಮನಾಥ:** ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಮೊದಲನೆಯದೇ ಸೋಮನಾಥ. ಈ ಕ್ಷೇತ್ರವು ಮೊಘಲರು ಮುಂತಾದವರಿಂದ ೧೭ಬಾರಿ ಲೂಟಿಯಾಗಿದೆ. ಇಲ್ಲಿಗೆ ಸಮುದ್ರ ದಡದಲ್ಲಿಯೇ ಪಯಣಿಸಬೇಕು. ಆ ದಾರಿಗೆ Costal High Road ಎನ್ನುತ್ತಾರೆ. ಈ ದೇಗುಲದ ಒಳಗೆಲ್ಲಾ ಚಿನ್ನದ ಲೇಪನವಿದೆ. ಜಗದ್ಗುರು ಶ್ರೀಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶಾರದಾಪೀಠ ಮತ್ತು ಅನೇಕ ದೇವಿ, ದೇವತೆಗಳ ವಿಗ್ರಹಗಳೂ ಇವೆ. ಮರಾಠಾ ಪೇಶ್ವೆಗಳಿಂದ ಪಾಲಿಸಲ್ಪಟ್ಟು ಸರದಾರ್ ವಲ್ಲಭ ಪಟೇಲರಿಂದ ಈ ಸ್ಥಳ ಅಭಿವೃದ್ಧಿಗೊಳಸಲ್ಪಟ್ಟಿತು. ಈ ದೇಗುಲದ ಗೋಪುರದ ಮೇಲೆ ಪ್ರತಿರಾತ್ರಿ ೭.೩೦ರಿಂದ ೮.೩೦ರ ವರೆಗೆ ಇಲ್ಲಿನ ಇತಿಹಾಸ ತೋರಿಸುವ ನೆರಳು-ಬೆಳಕಿನ ಪ್ರದರ್ಶನ ಇರುತ್ತದೆ.

**ನಾಗೇಶ್ವರ:** ದಾರುಕಾವನ ಎಂದು ಕರೆಯಲ್ಪಡುವ ಈ ಸ್ಥಳದಲ್ಲಿ ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾದ ನಾಗೇಶ್ವರ ದೇವಾಲಯವಿದೆ. ಹತ್ತಿರದಲ್ಲಿ ಸೂರ್ಯಮಂದಿರವೂ ಇದೆ. ಇದು ದ್ವಾರಕೆಗೆ ೧೮. ಕಿ.ಮೀ. ದೂರದಲ್ಲಿದೆ. ಪಕ್ಕದಲ್ಲೇ ಬೃಹತ್ ಈಶ್ವರನ ವಿಗ್ರಹವನ್ನು ನಿರ್ಮಿಸಿದ್ದಾರೆ.

**ಸ್ವಾಮಿ ನಾರಾಯಣ ಮಂದಿರ:** ಅಹಮದಾಬಾದ್‌ನಲ್ಲಿ ಸ್ವಾಮಿ ನಾರಾಯಣ ಪಂಥದ ಅತ್ಯಂತ ಬೃಹತ್ತಾದ ಮಂದಿರವಿದೆ. ಸ್ವಾಮಿ ನಾರಾಯಣ ವಿಗ್ರಹ ಚಿನ್ನದಲ್ಲಿ ಮಾಡಿದ್ದು ಅವರ ಕಡೆ ಜೀವನ ಚರಿತ್ರೆಯನ್ನು ತಿಳಿಸುವ ಬೊಂಬೆಗಳು ಇವೆ.

## ಉತ್ತರಪ್ರದೇಶ

ಉತ್ತರಪ್ರದೇಶದ ಬಹಳ ಮುಖ್ಯ ತೀರ್ಥಕ್ಷೇತ್ರ **ವಾರಾಣಸಿ** ಅಥವಾ ಕಾಶಿ. ವಾರಣಾ+ಅಸಿ ಎಂಬ ಎರಡು ನದಿಗಳು ಇಲ್ಲಿ ಗಂಗೆಗೆ ಸೇರುವುದರಿಂದ ವಾರಾಣಸಿ ಎಂಬ ಹೆಸರು ಬಂದಿದೆ. ಇಲ್ಲಿ ೩,೩೫ ದೇವಸ್ಥಾನಗಳಿವೆಯೆಂದು ಹೇಳಿದೆ.

ವಿಶ್ವೇಶ್ವರನು ಈ ನಗರಕ್ಕೆ ಅಧಿಪತಿ ಎಂದು ಪ್ರತೀತಿ. ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾದ ವಿಶ್ವೇಶ್ವರನನ್ನು ಪ್ರತಿದಿನ ಸಂಜೆ ಸಪ್ತ ಋಷಿಗಳ ಪ್ರತೀಕವಾಗಿ ಅರ್ಚಕರು ಪೂಜಿಸುತ್ತಾರೆ. ಮುಸಲ್ಮಾನರು ದಾಳಿ ಮಾಡಿದಾಗ ಲಿಂಗರೂಪಿ ವಿಶ್ವೇಶ್ವರನನ್ನು ಪಕ್ಕದಲ್ಲೇ ಇರುವ ಬಾವಿಯಲ್ಲಿ ಮುಚ್ಚಿಟ್ಟದ್ದರೆಂದೂ ಈಗಿರುವುದು ಹೊಸದಾದ ಲಿಂಗವೆಂದೂ ಹೇಳುತ್ತಾರೆ. ಪ್ರತಿದಿನ ಚಿತಾಭಸ್ಮದಿಂದಲೇ ಅಭಿಷೇಕ ನಡೆಯುತ್ತದೆ. ವಿಶ್ವನಾಥನ ದರ್ಶನಮಾಡಿ, ಧ್ಯಾನ, ಜಪತಪಾದಿಗಳನ್ನು ಮಾಡಿದರೆ ಪಾಪಗಳೆಲ್ಲಾ ಕಳೆಯುತ್ತವೆ. ಕಾಶಿಯ ದರ್ಶನವೇ ಪುಣ್ಯ ಎನ್ನುವುದು ಹಿಂದುಗಳ ನಂಬಿಕೆ.

ವಾರಾಣಸಿಯಲ್ಲಿ ಸುಮಾರು ೮೦ ಘಾಟ್‌ಗಳಿವೆ. ಮಣಿಕರ್ಣಿಕಾ ಘಾಟ್, ದಶಾಶ್ವಮೇಧ ಘಾಟ್, ಕೇದಾರಘಾಟ್, ಪಂಚಗಂಗಾಘಾಟ್, ಹರಿಶ್ಚಂದ್ರಘಾಟ್ ಮುಖ್ಯವಾದವುಗಳು. ಹರಿಶ್ಚಂದ್ರ ಘಾಟ್ ಮತ್ತು ಮಣಿಕರ್ಣಿಕಾ ಘಾಟ್‌ಗಳ ಮೂರೂ ಕಡೆಗಳಲ್ಲಿ ಪ್ರಸಿದ್ಧ ಗಂಗಾರತಿ ಸಂಜೆಹೊತ್ತಿನಲ್ಲಿ ನಡೆಯುತ್ತದೆ. ಈ ಆರತಿ ನೋಡಲು ಲಕ್ಷಾಂತರ ಜನ ಸೇರಿರುತ್ತಾರೆ. ಸಂಜೆ ೬.೩೦ರಿಂದ ೭.೩೦ರ ವರೆಗೆ ಆರತಿ ನಡೆಯುತ್ತದೆ.

ನಗರ ರಕ್ಷಕ ಕಾಲಭೈರವನಿಗೆ ವಿಶ್ವೇಶ್ವರನಷ್ಟೇ ಮಹಿಮೆ ಇದೆ. ಇವನನ್ನು ಕ್ಷೇತ್ರಪಾಲಕ ಎನ್ನುತ್ತಾರೆ. ಬಾರೋನಾಥ ಎಂಬಲ್ಲಿ ಈ ದೇವಸ್ಥಾನವಿದೆ. ತುಂಬಾ ಪುರಾತನವಾದ ಈ ದೇಗುಲದ ಮೂರ್ತಿ ಕಾಲಭೈರವನ ಕೊರಳಲ್ಲಿ ತಲೆ ಬುರುಡೆಯ ಹಾರವಿದ್ದು ಈತನ ವಾಹನ ನಾಯಿ. ಇವನು ಶಿವನ ಒಂದು ಭಾಗ ಎನ್ನುತ್ತಾರೆ. ಕಾಶಿಯ ಜನರು ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಮೊದಲು ಕಾಲಭೈರವನಿಗೆ ಪೂಜೆ ಸಲ್ಲಿಸುವುದು ವಾಡಿಕೆ.

ವಿಶಾಲಾಕ್ಷಿ ಮಂದಿರವು ಹತ್ತಿರದಲ್ಲಿಯೇ ಇದೆ. ಪುಟ್ಟದಾದ

ವಿಗ್ರಹ ತುಂಬಾ ಸುಂದರವಾಗಿದೆ. ಪರಶಿವನಿಗೇ ಅನ್ನ ನೀಡಿದ ಅನ್ನಪೂರ್ಣೇಶ್ವರಿ ದೇಗುಲ ವಿಶ್ವೇಶ್ವರನ ದೇಗುಲದ ಪಕ್ಕದಲ್ಲಿಯೇ ಇದೆ. ದೀಪಾವಳಿಯಂದು ಅನ್ನಕೂಟದ ದಿನ ಎಂದು ಆಚರಿಸಿ ಅನ್ನಪೂರ್ಣೇಶ್ವರಿಯ ಚಿನ್ನದ ಪುತ್ಥಳಿಯನ್ನು ಹೊರತಂದು ಪೂಜಿಸುತ್ತಾರೆ.

**ಪ್ರಯಾಗ:** ತೀರ್ಥಕ್ಷೇತ್ರಗಳಲ್ಲಿಯೇ ಅತ್ಯಂತ ಶ್ರೇಷ್ಠ ಕ್ಷೇತ್ರ ಪ್ರಯಾಗ. ಈ ಸ್ಥಳವನ್ನು ಶ್ರೀಲಲಿತಾದೇವಿಯ ಶಕ್ತಿಪೀಠವೆಂದು ಕರೆಯಲ್ಪಡುತ್ತದೆ. ಪ್ರಾಚೀನ ತೀರ್ಥವೆನ್ನಲಾದ ಗಂಗಾ-ಯಮುನಾ - ಗುಪ್ತಗಾಮಿನಿ ಸರಸ್ವತಿ ನದಿಗಳ ಸಂಗಮ ಸ್ಥಾನವಿದು. ಇಲ್ಲಿ ಸ್ನಾನ ಮಾಡುವುದರಿಂದ ಬ್ರಹ್ಮಹತ್ಯಾದೋಷ ನಿವಾರಣೆಯಾಗುತ್ತದೆಂದು ಪ್ರತೀತಿ. ೧೨ ವರ್ಷಕ್ಕೊಮ್ಮೆ ಇಲ್ಲಿ ಕುಂಭಮೇಳ ನಡೆಯುತ್ತದೆ. ಇಲ್ಲಿ ಪಿತೃಗಳಿಗೆ ಶ್ರಾದ್ಧಾದಿಕರ್ಮಗಳನ್ನು ಮಾಡುವುದರಿಂದ ಅವರಿಗೆ ಮೋಕ್ಷ ಸಿಗುವುದೆಂದು ನಂಬಿಕೆ ಈ ಸ್ಥಳದಲ್ಲಿ ಅನೇಕ ಯಜ್ಞಯಾಗ ನಡೆದಿದ್ದರಿಂದ ಪ್ರಯಾಗ ಎಂದು ಹೆಸರು ಬಂದಿದೆ.

**ಅಯೋಧ್ಯೆ :** ಉತ್ತರಪ್ರದೇಶದ ಪ್ರಮುಖ ಪವಿತ್ರ ಯಾತ್ರಾ ಸ್ಥಳ ಅಯೋಧ್ಯೆಯನ್ನು ಸಾಕೇತಪುರ ಎಂದೂ ಕರೆಯಲಾಗುತ್ತದೆ. ಸರಯೂ ನದಿಯ ತೀರದಲ್ಲಿರುವ ಈ ಕ್ಷೇತ್ರ ಶ್ರೀರಾಮಚಂದ್ರನ ಜನ್ಮಭೂಮಿ. ರಾಜಾ ದಶರಥನ ರಾಜಧಾನಿ. ಜಗತ್ತಿನ ಏಳು ಮೋಕ್ಷ ಕಾರಕ ನಗರಗಳಲ್ಲಿ ಇದೂ ಒಂದಾಗಿದೆ. ಸೂರ್ಯವಂಶದ ರಾಜರುಗಳು ಆಳಿದ ನಗರ. ಕಾಲಚಕ್ರದ ಪರಿಭ್ರಮಣೆಯೊಂದಿಗೆ ನಮ್ಮ ಸನಾತನ ಕ್ಷಾತ್ರ ತೇಜ, ತ್ರೇತಾಯುಗದಿಂದ ಈ ಕಲಿಯುಗದ ಪ್ರಥಮ ಪಾದದವರೆಗೆ ಹರಿದು ಬರುತ್ತಲೇ ಇರುವುದಕ್ಕೆ ಸಾಕ್ಷಿಯಾಗಿದೆ. ಕುಶಮಹಾರಾಜ ಕಟ್ಟಿದ ಪುರಾತನ ಭವ್ಯ ಶ್ರೀರಾಮಮಂದಿರವನ್ನು ಸಾಮ್ರಾಟ್ ವಿಕ್ರಮಾದಿತ್ಯ ಪುನರುತ್ಥಾನಗೊಳಿಸಿದ ಎಂಬುದು ಇತಿ ಹಾಸಕಾರರ ಹೇಳಿಕೆ. ೧೫೨೮ರಲ್ಲಿ ಬಾಬರನ ಸೇನಾಪತಿ ಮೀರ್ ಬಾಹಿರ್ ೭ ಅಂತಸ್ತುಗಳ ಕಟ್ಟಡ ಕೆಡಹಿ ಜನ್ಮಸ್ಥಾನ್ ಕಟ್ಟಿಸಿದನೆನ್ನಲಾಗಿದೆ. ಪ್ರಸ್ತುತ ರಾಮಜನ್ಮ ಭೂಮಿಯ ತಕರಾರುಗಳು ಕಳೆದು ನವನವೀನ, ಭವ್ಯ, ಶ್ರೇಷ್ಠಶ್ರೀರಾಮಮಂದಿರದ ನಿರ್ಮಾಣ ಪ್ರಾರಂಭವಾಗಿದೆ. ಇದು ಹಿಂದೂಗಳ ಶ್ರದ್ಧೆಯ ಹೋರಾಟಕ್ಕೆ ಸಿಕ್ಕ ಗೆಲುವಿಗೆ ಸಾಕ್ಷಿ.

**ಮಥುರಾನಗರ:** ಭಗವಾನ್ ಶ್ರೀಕೃಷ್ಣನ ಪಾವನ ಜನ್ಮ ಸ್ಥಳವಾದ ಈ ಪ್ರಸಿದ್ಧವಾದ ಕ್ಷೇತ್ರ ಉತ್ತರಪ್ರದೇಶ ರಾಜ್ಯದಲ್ಲಿದೆ. ಈಗಲೂ ಇಲ್ಲಿನ ಜನ ರಾತ್ರಿಸಮಯದಲ್ಲಿ ಶ್ರೀಕೃಷ್ಣ ಇಲ್ಲಿ ಇರುತ್ತಾನೆ ಎಂದು ನಂಬುತ್ತಾರೆ. ಇಲ್ಲಿನ ಜನಕ್ಕೆ ಶ್ರೀಕೃಷ್ಣನ ಬಗ್ಗೆ ಎಂಥಾ ಅದ್ಭುತ ಶ್ರದ್ಧೆ ಎಂದರೆ ಈಗಲೂ ಕೃಷ್ಣ ಜನನವಾದ ಕಾರಾಗೃಹದಲ್ಲಿ ವರ್ಷದ ೩೬೫ ದಿನ ೨೪ ಗಂಟೆಗಳು ಬಿಡದೆ ಶ್ರೀಕೃಷ್ಣನ ಭಜನೆ ಮಾಡುತ್ತಾರೆ.

ಇಲ್ಲಿನ ಕೋಟೆಯನ್ನು ಕಂಸನ ಕೋಟೆ ಎಂದು ಕರೆಯುತ್ತಾರೆ. ರಾಜಾಮಾನ್‌ಸಿಂಗ್ ಈ ಕೋಟೆಯನ್ನು ಕಟ್ಟಿಸಿದ್ದು ಎಂದು ಇತಿಹಾಸಕಾರರ ಅಭಿಪ್ರಾಯ. ಯಮುನಾನದಿ ತೀರದಲ್ಲಿರುವ ಮಥುರಾ ನಗರದಲ್ಲಿ ರುಕ್ಮಿಣೀಮಂದಿರ, ಭಾಗವತ ಮಂದಿರ, ದ್ವಾರಕಾಧೀಶ ಮಂದಿರ ಮುಂತಾದ ಅನೇಕ ಮಂದಿರಗಳಿವೆ.

ದ್ವಾರಕಾಧೀಶ ಮಂದಿರದಲ್ಲಿ ೮ ಬಾರಿ ಶ್ರೀಕೃಷ್ಣನನ್ನು ನೋಡಲು ಅವಕಾಶವಿದೆ. ಇಲ್ಲಿನ ಕಲಾಕೃತಿಗಳು ಬಹಳ ಪ್ರಸಿದ್ಧ, ಉಯ್ಯಾಲೆ ಉತ್ಸವ ತುಂಬಾ ಪ್ರಸಿದ್ಧವಾದುದು. ಕುಸುಮ ಸರೋವರ ತುಂಬಾ ಪ್ರಸಿದ್ಧ. ೧೮ನೇ ಶತಮಾನದಲ್ಲಿ ತನ್ನ ತಂದೆ ತಾಯಿಯವರ ನೆನಪಿನಲ್ಲಿ, ರಾಜಸ್ಥಾನಿ ವಾಸ್ತು ಕಲಾಪ್ರಕಾರದಲ್ಲಿ ರಾಜಾ ಮಾನ್‌ಸಿಂಗ್ ಕಟ್ಟಿಸಿದ್ದು. ತುಂಬಾ ಸುಂದರವಾಗಿದ್ದು ಶ್ರೀ ಚೈತನ್ಯ ಮಹಾಪ್ರಭು ದಿನಕ್ಕೆರಡು ಬಾರಿ ಇಲ್ಲಿ ಸ್ನಾನ ಮಾಡುತ್ತಿದ್ದರು ಎನ್ನುತ್ತಾರೆ. ಇಲ್ಲಿ ಪೇಟೆ ಬೀದಿಯನ್ನು ತಿಲಕ್‌ದ್ವಾರ್ ಎನ್ನು ತ್ತಾರೆ, ಗೀತಾಮಂದಿರ್, ವಿಶ್ರಾಮ ಘಾಟ್ ಮುಂತಾದ ಸ್ಥಳಗಳಿವೆ.

**ವೃಂದಾವನ:** ಯಮುನಾ ನದೀದಡದಲ್ಲಿರುವ ಭಗವಾನ್ ಶ್ರೀಕೃಷ್ಣನು ಬಾಲಲೀಲೆಗಳನ್ನಾಡಿದ ಸ್ಥಳ ವೃಂದಾವನ. ಇಲ್ಲಿನ ಬಾಂಕೇಬಿಹಾರಿ ಮಂದಿರ ತುಂಬಾ ಪ್ರಸಿದ್ಧ ತಾನಸೇನನ ಗುರು ಹರಿದಾಸ ಕಟ್ಟಿಸಿದನೆನ್ನಲಾಗಿದೆ. ಇಲ್ಲಿ ಗಂಟೆ ಹೊಡೆಯುವಂತಿಲ್ಲವೆನ್ನುವುದೇ ವಿಶೇಷ. ಮದನಮೋಹನ ಮಂದಿರವನ್ನು ಶ್ರೀಕೃಷ್ಣನ ಮೊಮ್ಮಗ ವ್ರಜನಾಥ ಕಟ್ಟಿಸಿದ್ದನೆನ್ನಲಾಗಿದೆ. ಈ ಮಂದಿರ ನಾಲ್ಕು ಧರ್ಮಗಳನ್ನು ಪ್ರತಿಬಿಂಬಿಸುವ ಮಂದಿರ.



**ಗಯಾ:** ಬೌದ್ಧರು, ಹಿಂದೂಗಳು, ಜೈನರಿಗೆ ಪವಿತ್ರಕ್ಷೇತ್ರವೆನಿ ಸಿರುವ ಗಯಾ ಕ್ಷೇತ್ರ ಬಿಹಾರ ರಾಜ್ಯಕ್ಕೆ ಸೇರಿದೆ. ಪಟನಾದಿಂದ ೧೦೦ ಕಿ.ಮೀ. ದೂರದಲ್ಲಿದೆ. ಫಲ್ಗುನಿ ನದಿ ಇಲ್ಲಿ ಹರಿಯುತ್ತದೆ. ವಿಷ್ಣುಪಾದವಿರುವ ಈ ಕ್ಷೇತ್ರದ ಉಲ್ಲೇಖ ರಾಮಾಯಣದಲ್ಲೂ ಇದೆ. ಈ ಸ್ಥಳವನ್ನು ನಾಗ, ನಂದ, ಮೌರ್ಯ, ಮಗಧ ವಂಶದ ರಾಜರು ಆಳಿದ್ದರೆಂದು ಚರಿತ್ರೆ ಹೇಳುತ್ತದೆ.

(ಬುದ್ಧ) ಬೌದ್ಧಗಯಾದಲ್ಲಿ ಬೋಧಿವೃಕ್ಷದ ಕೆಳಗೆ ಬುದ್ಧ ೬ ವರ್ಷ ತಪಸ್ಸು ಮಾಡಿ ಜ್ಞಾನ ಪಡೆದ ಸ್ಥಳ. ಇಲ್ಲಿ ಮಹಾಬೋಧಿ ಮಂದಿರ, ಥಾಯ್‌ಮಠ, ಬುದ್ಧನ ಅನೇಕ ಪ್ರತಿಮೆಗಳಿವೆ.

ಗಯಾದಲ್ಲಿ ಫಲ್ಗುಣಿ ನದಿಯ ದಡದಲ್ಲಿ ಪಿತೃಗಳಿಗೆ ಶ್ರಾದ್ಧ ಮಾಡಿ ವಿಷ್ಣು ಪಾದದಲ್ಲಿ ಪಿಂಡವನ್ನರ್ಪಿಸಿದರೆ ಪಿತೃಗಳಿಗೆ ಮೋಕ್ಷ ಸಿಗುವುದೆಂಬ ಪ್ರತೀತಿ ಇದೆ. ಇಲ್ಲಿ ಶ್ರಾದ್ಧಾದಿಗಳನ್ನು ಮಾಡಿ ಕಾಮ, ಕ್ರೋಧ, ಲೋಭ ಮುಂತಾದವುಗಳ ಪ್ರತೀಕವಾಗಿ ಸಿಹಿ ತಿಂಡಿ, ಹಣ್ಣು, ತರಕಾರಿ ಮುಂತಾದವುಗಳನ್ನು ಬಿಡಬೇಕು ಎಂದು ಶಾಸ್ತ್ರವಿದೆ.

**ಉಜ್ಜಯಿನಿ:** ಆವಂತಿಕಾ ನಗರ ಎಂದು ಕರೆಯಲ್ಪಡುವ ಇಲ್ಲಿನ ಮಹಾಕಾಲೇಶ್ವರ ಮಂದಿರವು ೧೨ನೇ ಜ್ಯೋತಿರ್ಲಿಂಗಗಳಲ್ಲಿ ಒಂದು. ದಕ್ಷಿಣಾಭಿಮುಖವಾಗಿ ಶಿವಲಿಂಗವನ್ನು ಸ್ಥಾಪಿಸಿರುವ ಈ ಕ್ಷೇತ್ರವು ಶಿಪ್ರಾನದಿಯ ದಡದಲ್ಲಿದೆ. ಇಲ್ಲಿ ಶ್ರೀರಾಮನ ಪಾದದ ಗುರುತು, ಗಳು ಪಾಂಡವರು ಬಂದು ಹೋದ ಗುರುತುಗಳು ಇವೆ. ಈ ಸ್ಥಳಕ್ಕೆ ೪೦೦೦ ವರ್ಷಗಳಷ್ಟು ಇತಿಹಾಸವಿದೆ. ವಿಂಧ್ಯ ಪರ್ವತಗಳ ಸಾಲಿನಲ್ಲಿ ದಂಡಕಾರಣ್ಯದ ಪಕ್ಕದಲ್ಲಿದೆ. ನಾವುದಲ್ಲಿ ಕೇಳಿದ ವಿಕ್ರಮ ಮತ್ತು ಬೇತಾಳ ಕಥೆಯೂ ಇಲ್ಲಿ ನಡೆಯಿತು.

ಈ ಕ್ಷೇತ್ರ ತಾಂತ್ರಿಕ ವಿದ್ಯೆಗಳನ್ನು ಸಿದ್ಧಪಡಿಸಿಕೊಳ್ಳುವ ಅಘೋರಿಗಳು, ಮಾಂತ್ರಿಕರಿಗೆ ತಕ್ಕ ಸ್ಥಳವಾಗಿದೆ. ಮಹಾಕಾಲೇಶ್ವರನಿಗೆ ಪ್ರತಿದಿನ ಚಿತಾಭಸ್ಮವನ್ನೇ ಅಭಿಷೇಕ ಮಾಡಲ್ಪಡುತ್ತದೆ. ಮಹಾಕಾಲೇಶ್ವರನ ಇನ್ನೊಂದು ವಿಶೇಷವೇನೆಂದರೆ ಕರ್ಕಾಟಕ ಸಂಕ್ರಾಂತಿ ವೃತ್ತವು ಮಧ್ಯಪ್ರದೇಶದ ಉಜ್ಜಯಿನಿಯ ಮೇಲೆ ಹಾದು, ಮೇರು ಪರ್ವತ, ಕುರುಕ್ಷೇತ್ರಗಳ ಮೇಲೆ ಹೋಗುತ್ತದೆ. ಕರ್ಕಾಟಕ ವೃತ್ತದ ಮೇಲೆ ಕಾಲವನ್ನು ಮೀರಿ ನಿಂತ ಚಂದ್ರ ಮತ್ತು ಅಂಗಾರಕರ ಜನ್ಮಭೂಮಿ ಎನಿಸುತ್ತದೆ. ಕಾಲಜ್ಞಾನದ ಈ ಅದ್ಭುತ ವಿಶೇಷವೆನಿಸುತ್ತದೆಯಾದ್ದರಿಂದ ಇಲ್ಲಿ ಈಶ್ವರನು ಮಹಾಕಾಲೇಶ್ವರ ಎನಿಸಿಕೊಳ್ಳುತ್ತಾನೆ. ಯಾವಾಗಲೂ ತೀರ್ಥಯಾತ್ರೆ ಇಲ್ಲಿಂದಲೇ ಪ್ರಾರಂಭಿಸಬೇಕೆನ್ನುತ್ತಾರೆ.

ಸಾಮ್ರಾಟ್ ಅಶೋಕ ರಾಜ್ಯಭಾರ ಮಾಡುತ್ತಿದ್ದಾಗ ಉಜ್ಜಯಿನಿ ಅವನ ರಾಜಧಾನಿಯಾಗಿತ್ತು. ಕ್ರಿ .ಪೂ. ೭೮ರಲ್ಲಿ ವಿಕ್ರಮಾದಿತ್ಯನು ಶಕರನ್ನು ಸೋಲಿಸಿದ ನಂತರ ವಿಕ್ರಮ.ಶಕೆ ಪ್ರಾರಂಭವಾಯಿತು ಎನ್ನುತ್ತಾರೆ. ಕವಿ ಕಾಳಿದಾಸನು ಇಲ್ಲಿಯವನಾಗಿ ತನ್ನ ಮೇಘದೂತ ಕಾವ್ಯದಲ್ಲಿ ಉಜ್ಜಯನಿಯ ಸೌಂದರ್ಯವನ್ನು ಹೊಗಳಿದ್ದಾನೆ. ೧೮ನೇ ಶತಮಾನದಲ್ಲಿ ಉಜ್ಜಯಿನಿ ಮರಾಠರ ಕೈಗೆ ಸಿಕ್ಕಿ ಸಿಂಧಿಯಾ ಪ್ರತಿಷ್ಠೆಯ ಸ್ಥಳವಾಯಿತು. ಆ ಸಮಯದಲ್ಲೇ ಅನೇಕ ದೇವಾಲಯಗಳು ಪುನರುಜ್ಜೀವನಗೊಂಡವು. ಶ್ರೀಕೃಷ್ಣನ ಗುರುಗಳಾದ ಗುರು ಸಾಂದೀಪಿನಿ ಗುರುಗಳ ಆಶ್ರಮವೂ ಇಲ್ಲಿದೆ.

## ಒಡಿಶಾ

ಒಡಿಶಾ ಒಂದು ವಿಚಿತ್ರವಾದ ಅಚ್ಚರಿಗಳ ಆಗರವಾದ ಸಮುದ್ರ ತೀರದಲ್ಲಿರುವ ಚಿಕ್ಕ ರಾಜ್ಯ. ಈ ರಾಜ್ಯದ ರಾಜಧಾನಿ ಭುವನೇಶ್ವರ ಸುಂದರವಾದ ನಗರ. ಇಲ್ಲಿ ಭುವನೇಶ್ವರನ ದೊಡ್ಡ ಬಂಡೆಯಾಕಾರದ ಲಿಂಗವಿದ್ದು ಪವಿತ್ರವಸ್ಥಳವೆನಿಸಿದೆ. ಇಲ್ಲಿ ೬೦೦೦ ಹಿಂದೂ ದೇವಾಲಯಗಳಿವೆ. ಈ ರಾಜ್ಯವು 'ದೇವಸ್ಥಾನಗಳ ರಾಜ್ಯ' ಎಂದು ಕರೆಯಲ್ಪಟ್ಟಿದೆ.

**ಪುರಿ:** ಸಮುದ್ರದ ಪಕ್ಕದಲ್ಲಿರುವ ಪುರಿ ಜಗನ್ನಾಥ ಕ್ಷೇತ್ರವು ಅತ್ಯಂತ ಪುರಾತನವಾದ ಪವಿತ್ರ ಕ್ಷೇತ್ರವಾಗಿದೆ. ಈ ದೇವಸ್ಥಾನ ಬಹು ವಿಸ್ತಾರವಾಗಿದ್ದು ಶ್ರೀಕೃಷ್ಣ, ಬಲಭದ್ರ, ಸುಭದ್ರೆಯರ ವಿಗ್ರಹಗಳಿವೆ. ಮರದಲ್ಲಿ ಮಾಡಲ್ಪಟ್ಟಿರುವ ಈ ವಿಗ್ರಹಗಳಿಗೆ ಕಾಲು, ಕೈಗಳಿಲ್ಲ. ಬರೀ ಮುಖ ಮಾತ್ರ ಇರುತ್ತದೆ. ಶ್ರೀ ಚೈತನ್ಯ ಮಹಾಪ್ರಭು ಜಗನ್ನಾಥನ ಪರಮ ಭಕ್ತರಾಗಿದ್ದರು. ಶಕ್ತಿ ಸ್ವರೂಪಿಣಿಯಾದ ಲಲಿತಾದೇವಿಯ ಸಣ್ಣ ದೇಗುಲ ಈ ದೇಗುಲದ ಪ್ರಾಕಾರದಲ್ಲಿಯೇ ಇದೆ. ಇಲ್ಲೂ ದ್ವಾರಕೆಯಂತೆ ಪ್ರತಿದಿನ ಬೆಳಗ್ಗೆ ಗೋಪುರದ ತುದಿಯಲ್ಲಿ ಧ್ವಜ ಹಾರಿಸಿ ಸಂಜೆ ಬಿಚ್ಚುತ್ತಾರೆ. ಆಷಾಢ ಮಾಸದಲ್ಲಿ ರಥಯಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಲಕ್ಷಾಂತರ ಭಕ್ತರು ಸೇರುವ ಈ ರಥಯಾತ್ರೆ ಪ್ರಸಿದ್ಧವಾದುದು. ಪ್ರಪಂಚದ ಅತಿ ದೊಡ್ಡ ಅಡಿಗೆ ಮನೆ ಇಲ್ಲಿದ್ದು ೪೦೦ ಜನ ಅಡಿಗೆ ಮಾಡುವವರು, ೨೦೦ ಅಡಿಗೆ ಕೊಠಡಿಗಳಿವೆ. ಇಲ್ಲಿನ ಅನ್ನಪ್ರಸಾದ ಸಾಕ್ಷಾತ್ ಪರಬ್ರಹ್ಮನೇ ಆಗಿದ್ದಾನೆಂದು ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಿದ್ದರು. ಜಗದ್ಗುರು ಶಂಕರಾಚಾರ್ಯರು ಪೂರ್ವಾಮ್ನಾಯ ಪೀಠವನ್ನೂ ಇಲ್ಲಿ ಸ್ಥಾಪಿಸಿದ್ದಾರೆ. ನಾವಿಕರು ಈ ದೇಗುಲವನ್ನು ದೂರದಿಂದ ಬಿಳಿ ಪಗೋಡ ಎಂದು ಗುರುತಿಸುತ್ತಿದ್ದರಂತೆ.

**ಕೋನಾರ್ಕ:** ಈ ಬೃಹತ್ ಹಾಗೂ ಪ್ರಸಿದ್ಧ ಸೂರ್ಯದೇವಾಲಯವು ದೇವಾಲಯವು ಪುರಿ ಜಿಲ್ಲೆಯ ಕೊನಾರ್ಕ್ ಪಟ್ಟಣದಲ್ಲಿದೆ. ಕೋನಾ ಅಂದರೆ ಮೂಲೆ, ಅರ್ಕ ಎಂದರೆ ಸೂರ್ಯ ಎಂದರ್ಥ. ಸೂರ್ಯ ದೇವರಿಗೆ ಮುಡಿಪಾದ ಈ ದೇವಾಲಯ ಶಿಲ್ಪಕಲೆಯ ವೈಭವಕ್ಕೆ ಹೆಸರಾಗಿದೆ. ಅನೇಕ ಮಂದಿ ಯಾತ್ರಿಕರು ಈ ದೇಗುಲಕ್ಕೆ ಭೇಟಿ ನೀಡುತ್ತಾರೆ.

ಪೂರ್ವ ಗಂಗಾಸಾಮ್ರಾಜ್ಯದ ಒಂದನೆಯ ನರಸಿಂಹದೇವನೆಂಬ ರಾಜನು ೧೨೫೦ ರಲ್ಲಿ ಈ ದೇವಾಲಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಪೂರ್ಣ ದೇವಸ್ಥಾನದ ರಥದ ರೀತಿಯಲ್ಲಿ ಕಟ್ಟಲ್ಪಟ್ಟಿದೆ. ಹನ್ನೆರಡು ಜೊತೆ ರಥದ ಚಕ್ರಗಳಿವೆ. ರಥವನ್ನು ಎಳೆಯುತ್ತಿರುವಂತಿರುವ ಕುದುರೆಗಳು, ಅಂದಿನ ಶಿಲ್ಪಕಲಾ ಕೌಶಲ್ಯದ ಪರಿಚಯ ಮಾಡಿಕೊಡುವು ದಲ್ಲದೆ ನೋಡುಗರನ್ನು ಆಶ್ಚರ್ಯದಿಂದ ಮೂಕರನ್ನಾಗಿಸುತ್ತದೆ. ಸಮುದ್ರದಡದಲ್ಲಿರುವ ಈ ದೇವಾಲಯದ ವಿಸ್ಮಯವೇನೆಂದರೆ ಸೂರ್ಯೋದಯವಾದ ತಕ್ಷಣ ಸೂರ್ಯನ ಕಿರಣಗಳು ದೇಗುಲದಲ್ಲಿರುವ ಸೂರ್ಯನ ಪಾದದ ಮೇಲೆ ಬೀಳುವಂತೆ ರಚಿಸಲಾಗಿದೆ. ಜೊತೆಗೆ ಗೋಪುರದ ನೆರಳು ಭೂಮಿಯ ಮೇಲೆ ಬೀಳುವುದಿಲ್ಲ. ಒಟ್ಟಿನಲ್ಲಿ ಈ ದೇವಾಲಯವು ಪ್ರಪಂಚದಲ್ಲೇ ಪ್ರಸಿದ್ಧವಾದುದು.

## ಪಶ್ಚಿಮ ಬಂಗಾಳ

City of Joy ಎಂದು ಕರೆಯಲ್ಪಡುವ ಕೊಲ್ಕತ್ತಾ ನಗರವು ಪಶ್ಚಿಮ ಬಂಗಾಲದ ರಾಜಧಾನಿ. ಕೋಲ್ಕತ್ತಾದ ಪ್ರಸಿದ್ಧ ದೇವಾಲಯಗಳು ಯಾವುವೆಂದರೆ ಬೇಲೂರಿನ ರಾಮಕೃಷ್ಣ ಮಠ, ದಕ್ಷಿಣೇಶ್ವರದ ಕಾಳಿ ದೇವಸ್ಥಾನ, ತಾರಕನಾಥ ದೇವಾಲಯ, ತಂತಾನಿಯಾ ಕಾಲಿಬಾರಿ, ಜೈನ ಮಂದಿರ, ಬಿರ್ಲಾಮಂದಿರ ಇತ್ಯಾದಿ. ದಕ್ಷಿಣೇಶ್ವರದ ಕಾಳಿ ದೇವಸ್ಥಾನವು ಎಷ್ಟು ಪ್ರಸಿದ್ಧವೋ ಬೇಲೂರಿನ ರಾಮಕೃಷ್ಣ ಮಠ ಅಷ್ಟೇ ಪ್ರಸಿದ್ಧವಾದುದು. ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಇದ್ದು, ಪ್ರಪಂಚದಾದ್ಯಂತ ಭಾರತದ ಹಿರಿಮೆಯನ್ನು ಬೆಳಗಿಸಿದ ಸ್ಥಳವಿದು. ಚಿಕಾಗೋ ಧರ್ಮಸಮ್ಮೇಳನದಲ್ಲಿ ಭಾರತದ ಆಧ್ಯಾತ್ಮಿಕ ಪತಾಕೆಯನ್ನು ಹಾರಿಸಿ, ನಮ್ಮ ಪೂರ್ವಜರಿಂದ ಪಾಲಿತವಾದ ಹಿಂದೂ

ಧರ್ಮವನ್ನು ಪ್ರಪಂಚಕ್ಕೆಲ್ಲಾ ಸಾರಿ ತೋರಿಸಿದ ಸ್ವಾಮಿ ವಿವೇಕಾನಂದರ ಸ್ಥಳ ಇದೇ. ಬೇಲೂರಿನ ಶ್ರೀರಾಮಕೃಷ್ಣರ ಭವ್ಯ ಮಂದಿರ, ದಕ್ಷಿಣೇಶ್ವರದ ಕಾಳೀಮಂದಿರ ತುಂಬಾ ಸುಂದರವಾಗಿದೆ. ಪ್ರಪಂಚದಲ್ಲೆಲ್ಲಾ ಶ್ರೀರಾಮಕೃಷ್ಣ ಮಠದ ಶಾಖೆಗಳು ಹರಡಿವೆ. ಪಶ್ಚಿಮ ಬಂಗಾಲದ ಬಹುಮುಖ್ಯ ಹಬ್ಬಗಳೆಂದರೆ ದುರ್ಗಾಪೂಜೆ, ಕಾಳೀಪೂಜೆ.

ಶ್ರೀರಾಮಕೃಷ್ಣರ ಹುಟ್ಟೂರು ಕಾಮಾರಪುಕುರ ಹಾಗೂ ಶ್ರೀಮಾತೆ ಶಾರದಾ ದೇವಿಯವರ ಹುಟ್ಟೂರು ಜಯರಾಮಬಾಟಿ ಯಾತ್ರಾಸ್ಥಳವಾಗಿದೆ.

### ಮಹಾರಾಷ್ಟ್ರ

ಮಹಾರಾಷ್ಟ್ರದ ಮುಖ್ಯ ಪವಿತ್ರ ಕ್ಷೇತ್ರಗಳಾದ ಮಹಾಬಲೇಶ್ವರ, ಮುಂಬೈನ ಮಹಾಲಕ್ಷ್ಮೀ ದೇವಸ್ಥಾನ, ತ್ರ್ಯಂಬಕೇಶ್ವರ ಜ್ಯೋತಿರ್ಲಿಂಗ, ಶಿರಡಿ, ನಾಸಿಕ್, ಪಂಢರಾಪುರದ ವಿಠಲ, ರುಕ್ಮಿಣಿ ಮಂದಿರ, ಪುಣೆಯ ದಗಡು ಶೇಟ್ ಗಣಪತಿ ಮಂದಿರ, ಜೋಗೇಶ್ವರಿ, ಅಂಬರನಾಥ್ ಶಿವಮಂದಿರ, ಮುಂಬೈನ ಪ್ರಭಾದೇವಿ ಗಣಪತಿ ಮಂದಿರ ಮುಂತಾದವುಗಳು ಪ್ರಸಿದ್ಧವಾದುವುಗಳು. ೧೨ ಜ್ಯೋತಿರ್ಲಿಂಗಗಳಲ್ಲಿ ೪ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರದಲ್ಲಿದೆ. ನಾಸಿಕದ ಬ್ರಹ್ಮಗಿರಿಯಲ್ಲಿರುವ ತ್ರ್ಯಂಬಕೇಶ್ವರ ಪ್ರಾಚೀನ ಜ್ಯೋತಿರ್ಲಿಂಗ ಮಂದಿರ. ಪರಳಿಯಲ್ಲಿರುವ ವೈಜನಾಥ ಜ್ಯೋತಿರ್ಲಿಂಗವು ಬಹು ಪ್ರಾಚೀನವಾದುದು. ಇನ್ನೊಂದು ಜ್ಯೋತಿರ್ಲಿಂಗವಾದ ಭೀಮಾಶಂಕರ ಪುಣೆ ಸಮೀಪದ ಖೇರ್ ಹತ್ತಿರ ಸಹ್ಯಾದ್ರಿ ಪರ್ವತ ಘಟ್ಟ ಪ್ರದೇಶದಲ್ಲಿ ಭೀಮಾನದಿಯ ದಡದಲ್ಲಿದೆ. ಕುಂಭಕರ್ಣನ ಮಗನನ್ನು ವಧಿಸಿದ್ದು ಇಲ್ಲಿಯೇ ಎಂದು ಪ್ರತೀತಿ ಇದೆ. ಲಿಂಗದ ಮಧ್ಯದಲ್ಲಿ ಗೆರೆ ಇದ್ದು ಅರ್ಧನಾರೀಶ್ವರ ಎಂದೂ ಕರೆಯುತ್ತಾರೆ. ಠಾಣಾ ಜಿಲ್ಲೆಯ ವಜ್ರೇಶ್ವರಿ ಬಿಸಿನೀರಿನ ಕುಂಡ ಗಳಿಗೆ ಪ್ರಸಿದ್ಧ. ಸ್ವಯಂಭೂ ಶನಿ ಸಿಂಗಾಪುರ ಪ್ರಸಿದ್ಧ ಪುಣ್ಯಕ್ಷೇತ್ರ. ಬಯಲಲ್ಲಿರುವ ಕಪ್ಪು ಕಲ್ಲೇ ಶನಿದೇವರು ಎಂದು ಪೂಜಿಸಲ್ಪಡುತ್ತದೆ. ತುಂಬಾ ಪ್ರಸಿದ್ಧವಾದ ಸ್ಥಳ. ಸತಾರದಲ್ಲಿರುವ ಯಮಯಾದೇವಿ ಮಂದಿರ ತುಂಬಾ ಪ್ರಸಿದ್ಧವಾದ ಸ್ಥಳ. ಮುಂಬೈನ ಪ್ರಭಾದೇವಿಯಲ್ಲಿರುವ ಸಿದ್ಧಿವಿನಾಯಕ ಪ್ರಸಿದ್ಧವಾದುದು. ಘೃಷ್ಣೇಶ್ವರ ಜ್ಯೋತಿರ್ಲಿಂಗವು ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ, ಎಲ್ಲೋರಾ ಹತ್ತಿರವಿದೆ. ಅಹಲ್ಯಾಬಾಯಿ ಹೋಳ್ಕರ್ ೧೮೦೦ರಲ್ಲಿ ಈ ದೇಗುಲವನ್ನು ಜೀರ್ಣೋದ್ಧಾರ ಮಾಡಿರುವರೆಂದು ತಿಳಿಯುತ್ತದೆ. ಕೊಲ್ಹಾಪುರದ ಮಹಾಲಕ್ಷ್ಮೀ ದೇವಸ್ಥಾನ ಪ್ರಾಚೀನ ಹಾಗೂ ಪ್ರಸಿದ್ಧ ಕ್ಷೇತ್ರ. ಇದು ಪಂಚಗಂಗಾನದಿ ದಡದಲ್ಲಿದೆ. ೭ನೇ ಶತಮಾನದಲ್ಲಿ ಚಾಲುಕ್ಯ ವಂಶದ ರಾಜಾ ಕರ್ಣದೇವ ಈ ದೇವಸ್ಥಾನವನ್ನು ಕಟ್ಟಿಸಿದನೆನ್ನಲಾಗಿದೆ. ಮೂರು ಅಡಿ ಎತ್ತರವಿರುವ ಮಹಾಲಕ್ಷ್ಮೀ ವಿಗ್ರಹ ಸುಂದರವಾಗಿದ್ದು ಕಿರೀಟವೇ ೪೦ ಕಿಲೋಗ್ರಾಂ ತೂಕವಿದೆ ಎಂದು ಹೇಳುತ್ತಾರೆ.

## ಜಮ್ಮು ಮತ್ತು ಕಾಶ್ಮೀರ

**ಅಮರಾನಾಥ ಕ್ಷೇತ್ರ :** ಭಕ್ತಿ, ಶ್ರದ್ಧೆಗಳಿಂದ ಹುಡುಕಿದರೆ ಭಗವಂತನ ದರ್ಶನವಾಗುವುದು. ಅದರಲ್ಲೂ ಅಮರನಾಥನ ದರ್ಶನ ಮಾಡಿದರೆ ಪರಮೇಶ್ವರನ ದರ್ಶನವಾಗಿ ಮೋಕ್ಷ ಸಿಗುವುದೆಂದು ಆಸ್ತಿಕರೆಲ್ಲರ ನಂಬಿಕೆ. ಅಮರನಾಥ ಯಾತ್ರೆ ಪ್ರತಿವರ್ಷ ಜೂನ್ ತಿಂಗಳಿಂದ ಆಗಸ್ಟ್ ಕೊನೆಯವರೆಗೆ ನಡೆಯುತ್ತದೆ. ದೇಶದ ಅತಿ ಕಠಿಣ ಯಾತ್ರೆ ಇದಾಗಿದೆ. ಈ ಕ್ಷೇತ್ರ ಪರಮೇಶ್ವರನ ಪವಿತ್ರ ಹಿಮಲಿಂಗ ಇರುವ ಗುಹೆ. ಆಷಾಢ ಪೂರ್ಣಿಮೆಯಿಂದ ರಕ್ಷಾ ಬಂಧನದವರೆಗೆ ಪೂರ್ತಿ ಹಿಮಲಿಂಗ ನಿರ್ಮಾಣವಾಗಿ ೧೦ ಅಡಿ ಎತ್ತರವಿರುತ್ತದೆ. ಪಾರ್ವತಿಗೆ ಪರಮೇಶ್ವರ ಇಲ್ಲಿ ಅಮರತ್ವವನ್ನು ಕುರಿತಂತೆ ರಹಸ್ಯವನ್ನು ಹೇಳಿದ ಸ್ಥಳ. ಅನೇಕ ಕಷ್ಟ, ಹವಾಮಾನದ ವೈಪರೀತ್ಯಗಳನ್ನು ಸಹಿಸಿಕೊಂಡು ಅಮರನಾಥನ ಗುಹೆ ತಲುಪುವುದು ಸುಲಭವಲ್ಲ. ಜಮ್ಮು ಕಾಶ್ಮೀರದಿಂದ ಪಹಲ್ ಗಾಂವ್‌ಗೆ ಹೋಗಿ ಅಲ್ಲಿಂದ ೩.೨ ಕಿ.ಮೀ ನಡೆದು ದರ್ಶನ ಪಡೆದು ಬಾಲ್ ತಾಲ್ ಕಡೆಯಿಂದ ವಾಪಸ್ ಬರಬಹುದು. ಮೊದಲು ಪಹಲ್ ಗಾಂವ್‌ನಿಂದ ಚಂದನವಾಡಿ, ನಂತರ ಅಲ್ಲಿಂದ ೧೬ ಕಿ.ಮೀ. ನಡಿಗೆ. ಚಂದನವಾಡಿಯಲ್ಲಿ ಈಶ್ವರ ತನ್ನ ತಲೆಯಲ್ಲಿದ್ದ ಚಂದ್ರನನ್ನೂ, ಶೇಷನಾಗ್‌ನಲ್ಲಿ ಸರ್ಪವನ್ನು, ಪಹಲ್‌ಗಾಂವ್‌ನಲ್ಲಿ ನಂದಿಯನ್ನು ಗಣೇಶ ಪಹಾಡ್‌ನಲ್ಲಿ ಗಣೇಶನನ್ನೂ, ಪಂಚತರಣಿಯಲ್ಲಿ ಗಂಗೆಯನ್ನು ತನ್ನ ಐದು ತತ್ತ್ವಗಳಿಗನುಸಾರವಾಗಿ ಬಿಟ್ಟಿದ್ದಾನೆಂದು ಪ್ರತೀತಿ. ನದಿದಡದಲ್ಲೇ ನಡೆದು ಶೇಷ್‌ನಾಗ್ ತಲುಪಬೇಕು. ಇದು ಝೀಲ್ ಸರೋವರದಂತಿದೆ. ಇಲ್ಲಿ ಭೀಮಶಿಖರ ಇದೆ. ಶೇಷ್‌ನಾಗ್ ಇಂದ ಹನ್ನೆರಡು ಕಿ.ಮೀ. ಪಂಚತರಣಿ ತಲುಪಬೇಕು. ಇಲ್ಲಿ ೫ ನದಿಗಳು ಹರಿಯುತ್ತವೆ. ನಂತರ ಅಮರನಾಥ ಗುಹೆ ತಲುಪಬೇಕಾಗುತ್ತದೆ. ಅಲ್ಲಿ ದರ್ಶನವಾಯಿತೆಂದರೆ ಎಲ್ಲ ಕಷ್ಟಗಳೂ ಗೊತ್ತಿಲ್ಲದಂತೆ ಮಾಯವಾಗಿ ಧನ್ಯತೆ ಮೂಡುತ್ತದೆ.

**ವೈಷ್ಣೋದೇವಿ:** ವೈಷ್ಣೋ ದೇವಿ ಪ್ರಮುಖ ಶಕ್ತಿ ಪೀಠವಾಗಿದೆ. ಜಮ್ಮು-ಕಾಶ್ಮೀರದ ಕಟ್ರಾ ಎಂಬ ಹಳ್ಳಿಯಲ್ಲಿದೆ. ಈ ದೇವಾಲಯ ತ್ರಿಕೂಟ ಪರ್ವತದ ಶಿಖರದಲ್ಲಿದೆ. ಗುಹೆಯಲ್ಲಿ ಮೂರು ಉಬ್ಬು ಕಲ್ಲುಗಳಿವೆ. ಇವುಗಳನ್ನೇ ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ ಎಂದು ಪೂಜಿಸುತ್ತಾರೆ. ದಕ್ಷಿಣದ ರತ್ನಾಕರ ಸಾಗರದಲ್ಲಿ ವೈಷ್ಣವ ಪಂಥದಲ್ಲಿ ಹುಟ್ಟಿದ್ದರಿಂದ ಈಕೆಯನ್ನು ವೈಷ್ಣವಿ, ವೈಷ್ಣೋ ದೇವಿ ಎಂದು ಕರೆಯುತ್ತಾರೆ.



೧೪ ಕಿ.ಮೀ. ಚಾರಣ ಮಾಡಿದರೆ ಸಿಕ್ಕುವುದೇ ಭೈರೋಬಾಬಾ ಎಂಬ ಈಶ್ವರನ ಮಂದಿರ. ಅಮೃತ ಶಿಲೆಯ ಈ ಗುಹೆ ೧೦ ಮೀಟರ್ ಅಗಲವಿದೆ. ಇಲ್ಲಿನ ಶಾಸ್ತ್ರದ ಪ್ರಕಾರ ವೈಷ್ಣೋದೇವಿಯನ್ನು ದರ್ಶನ ಮಾಡಿದವರು ಭೈರೋಬಾಬಾ ದರ್ಶನ ಮಾಡಲೇಬೇಕು ಎಂದಿದೆ.

## ಆಂಧ್ರಪ್ರದೇಶ

ಆಂಧ್ರಪ್ರದೇಶವು ಮಹಾಧಾರ್ಮಿಕ ಮಹತ್ವವುಳ್ಳ ದೊಡ್ಡ ರಾಜ್ಯ. ಚಿತ್ತೂರು ಜಿಲ್ಲೆಯಲ್ಲಿರುವ ತಿರುಮಲ-ತಿರುಪತಿ ಶ್ರೀವೆಂಕಟೇಶ್ವರನ ದೇಗುಲ ಪ್ರಪಂಚದಲ್ಲೇ ಬಹು ಪ್ರಸಿದ್ಧ ಪುಣ್ಯಕ್ಷೇತ್ರ, ಶ್ರೀಮಂತ ದೇಗುಲ. ತಿರುಮಲ-ಶ್ರೇಷ್ಠವಾದ ಬೆಟ್ಟ ಎಂದರ್ಥ. ಬೆಟ್ಟಕ್ಕೆ ಹೋಗಲು ಕೆಳಗೆ ಗೋವಿಂದರಾಜ ಪಟ್ಟಣದಿಂದ ಬಸ್ಸು, ನಡೆಯಲು ಮೆಟ್ಟಿಲುಗಳಿವೆ. ಶ್ರೀವೆಂಕಟರಮಣಸ್ವಾಮಿ ವಿಗ್ರಹ ತುಂಬಾ ಸುಂದರವಾಗಿದೆ. ಇಲ್ಲಿನ ಪ್ರಸಾದದ ಲಾಡು ತುಂಬಾ ಪ್ರಸಿದ್ಧ. ದ್ರಾವಿಡ ಶೈಲಿಯಲ್ಲಿರುವ ಶಕ್ತಿಪೀಠ ಕನಕದುರ್ಗಾ ಮಂದಿರ. ಬಹುಪ್ರಾಚೀನ ಮಂದಿರವಾಗಿದ್ದು ಇಂದ್ರ ಶಿಲಾದ್ರಿ ಬೆಟ್ಟದಲ್ಲಿದೆ. ವೈದ್ಯಕೀಯ ಗ್ರಂಥದಲ್ಲೂ ಈ ದೇಗುಲದ ಉಲ್ಲೇಖ ವಿದೆ.

ಕೃಷ್ಣಾನದಿ ದಡದಲ್ಲಿರುವ, ದಕ್ಷಿಣ ಕೈಲಾಸ ಎಂದು ಹೆಸರಿರುವ ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಶ್ರೀಶೈಲ ಬೆಟ್ಟದಲ್ಲಿರುವ ಶ್ರೀಭ್ರಮರಾಂಬ ಮಲ್ಲಿಕಾರ್ಜುನ ದೇವಸ್ಥಾನ ಪ್ರಸಿದ್ಧವಾದದ್ದು. ೬ನೇ ಶತಮಾನದಲ್ಲಿ ಹರಿಹರ ರಾಯ್ ಎಂಬುವನು ಪ್ರತಿಷ್ಠಾಪಿಸಿದನೆಂದು ಪ್ರತೀತಿ. ಮಲ್ಲಿಕಾರ್ಜುನನ ಭಕ್ತೆಯಾದ ಶರಣೆ ಅಕ್ಕ ಮಹಾದೇವಿ ಐಕ್ಯವಾದ ಸ್ಥಳ ಇದೇ ಆಗಿದೆ.

**ಶ್ರೀಶೈಲ ಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ॥**

'ಶ್ರೀಶೈಲದ ದೇವಸ್ಥಾನದ ಗೋಪುರದ ತುದಿ ನೋಡಿದರೆ ಪುನರ್ಜನ್ಮವಿರುವುದಿಲ್ಲ' - ಎಂಬ ಉಕ್ತಿಯಿದೆ.

ಚಿತ್ತೂರು ಜಿಲ್ಲೆಯ **ಕಾಳಹಸ್ತಿ** ಮಂದಿರ ಬಹಳ ಪುರಾತನವಾದದ್ದು ಶಿವಮಂದಿರ, ಪಲ್ಲವರ ಕಾಲದ್ದು ಎಂದು ಹೇಳಲ್ಪಡುತ್ತದೆ. ಇದನ್ನು ಪಂಚತತ್ತ್ವಗಳ ಸ್ಥಳ ಎಂದು ಹೇಳುತ್ತಾರೆ.

**ಲೇಪಾಕ್ಷಿ ಮಂದಿರ :** ಇದು ಅನಂತಪುರದಲ್ಲಿದೆ. ಬಹಳ ಪ್ರಸಿದ್ಧವಾದ ಮಂದಿರ. ಇಲ್ಲಿನ ಕಂಬಗಳು ಅಲ್ಲಾಡುವುದರಿಂದ Hanging Piller ಎಂದು ಕರೆಯಲ್ಪಡುತ್ತದೆ. ಇಲ್ಲಿರುವ ವೀರಭದ್ರ ಮಂದಿರವೂ ಪ್ರಸಿದ್ಧ ಹಾಗೂ ರಹಸ್ಯಮಯ ದೇಗುಲ ಎನ್ನುತ್ತಾರೆ.

ಹೀಗೆ ಭಾರತದ ಉದ್ದಗಲಕ್ಕೂ ಇನ್ನೂ ಅನೇಕ ತೀರ್ಥಕ್ಷೇತ್ರಗಳಿವೆ. ಆಸ್ತಿಕರು ಭಕ್ತಿಯಿಂದ ಪುಣ್ಯಕ್ಷೇತ್ರಗಳ ದರ್ಶನದಿಂದ ಪುಣ್ಯಗಳಿಸಲಿ ಎಂಬುದು ಆಶಯ. ದರ್ಶನದಿಂದ ಮಾನಸಿಕ ನೆಮ್ಮದಿ, ಸಮಾಧಾನ ಸಿಗುತ್ತದೆ ಎಂಬುದು ಶಾಸ್ತ್ರಗಳಲ್ಲಿ, ಪುರಾಣ ಕಥೆಗಳಲ್ಲಿ ಉಕ್ತವಾಗಿದೆ. ✽




SSES

SREE SIDDAGANGA EDUCATION SOCIETY®

Sree Siddaganga Math, Tumkur - 572 104, Karnataka , India.

Ph: 2282411, 2282211 E-mail: sses_swamigalu@yahoo.co.in Website: www.sses.org.in

Sree Siddaganga Education Society, Sree Siddagangamath was established on 17th July 1963 with the divine blessings of Dr. Sree Sivakumaraswamigalu, Sree Siddagangamath with an Object to promote Education and Culture by Establishing, maintaining or mananging Colleges, Schools, Institutions, Training Centres, Medical Colleges, Hospitals, Research Centers, Libraries, Hostels etc.

Sree Siddaganga Education Society is running about 125 Institutions as on date right from Nursery to Engineering and Post Graduate Courses. It is being run under the blessings and able guidance of Dr. Sree Sivakumara Swamigalu the Hon'ble President of Sree Siddaganga Education Society, Sree Siddagangamath.

A Free Boarding & Lodging Home for 9000 Students is also being run at Sree Siddagangamath by His Holiness Sree Sree Siddalingaswamigalu the Revered President of Sree Siddaganga Education Society.

Sd/

T.K. Nanjundappa

Secretary